ವಿಜಯಪುರ | ಸಂಪುಟ 04 | ಸಂಚಿಕೆ 205 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಬುಧವಾರ, ಅಕ್ಟೋಬರ್ 07, 2026

"ಕರ್ನಾಟಕ ಬಿಜೆಪಿಯವರು ಕುತಂತ್ರದ ರಾಜಕಾರಣ ಮಾಡಬಾರದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯನ್ನು ಗೆಲ್ಲಬೇಕು. ಈ ರೀತಿ ಚುನಾವಣಾ ಆಯೋಗವನ್ನು ಬಳಸಿಕೊಂಡು ಮತಪಟ್ಟಿ ತಿರುಚಬಾರದು."



■ ಡಿ ಕೆ ಶಿವಕುಮಾರ್
ಮುಖ್ಯಮಂತ್ರಿ

# ಕೆಪಿಎಸ್ಸಿ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಬಂಧನ!

## ಕೆಪಿಎಸ್ಸಿ ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿ ಹಗರಣ | ಇಡಿ ಯಿಂದ ಶಿವಶಂಕರಪ್ಪ ಸಾಹುಕಾರ್ ಹಾಗೂ ಸದಸ್ಯೆ ಬಿವಿ ಗೀತಾ ಅರೆಸ್ಟ್

ಬೆಂಗಳೂರು: ರಾಜ್ಯದಲ್ಲಿ ತೀವ್ರ ಸಂಚಲನ ಸೃಷ್ಟಿಸಿರುವ ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್ ಸಿ) ನಡೆಸಿದ್ದ ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ(ಇಡಿ)ದ ಅಧಿಕಾರಿಗಳು ಮಂಗಳವಾರ ಕೆಪಿಎಸ್ಸಿ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಹಾಗೂ ಸದಸ್ಯೆ ಬಿವಿ ಗೀತಾ ಅವರನ್ನು ಬಂಧಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ಎರಡನೇ ಬಾರಿ ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿರುವ ಶಿವಶಂಕರಪ್ಪ ಸಾಹುಕಾರ್ ಅವರ ನಿವಾಸದ ಮೇಲೆ ಇಡಿ ದಾಳಿ ಮಾಡಿ ಪರಿಶೀಲನೆ ನಡೆಸಿತ್ತು. ಈ ವೇಳೆ ಮನೆಯಲ್ಲೇ ಇದ್ದ ಶಿವಶಂಕರಪ್ಪ ಅವರನ್ನು ವಿಚಾರಣೆ ನಡೆಸಿದ ಇಡಿ ಅಧಿಕಾರಿಗಳು, ಬಳಿಕ ವಶಕ್ಕೆ ಪಡೆದುಕೊಂಡಿದ್ದಾರೆ.

ಇನ್ನೊಂದೆಡೆ ಇದೇ ಪ್ರಕರಣದಲ್ಲಿ ಕೆಪಿಎಸ್




ಸಿ ಸದಸ್ಯೆ ಬಿ.ವಿ.ಗೀತಾ ಅವರನ್ನು ಬೆಂಗಳೂರಿನ ಅವರ ಮನೆಯಲ್ಲೇ ಇಡಿ ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ. ಗೀತಾ ಅವರು ಅಭ್ಯರ್ಥಿಗಳ ಜೊತೆ ನೇರ ಸಂಪರ್ಕ ಹೊಂದಿದ್ದ ಆರೋಪ ಎದು-ರಿಸುತ್ತಿದ್ದಾರೆ.

ಶಿವಶಂಕರಪ್ಪ ಅವರ ಸಂಬಂಧಿ ಸುಗುರೇಶ್ ಜಾಕಾ ತಪ್ಪೊಪ್ಪಿಗೆ ಮತ್ತು ಬಂಧಿತ ಐಎಎಸ್ ಅಧಿಕಾರಿ ಗ್ಯಾನೇಂದ್ರ ಅವರ ಹೇಳಿಕೆ ಆಧರಿಸಿ ಇಡಿ ದಾಳಿ ನಡೆಸಿದ್ದು, ನೇಮಕಾತಿಯಲ್ಲಿ ಅಕ್ರಮ ಮಾಡಲು ಸುಗುರೇಶ್ ಜಾಕಾಗೆ ಶಿವಶಂಕರಪ್ಪ ಸೂಚಿಸಿದ್ದರು. ಹೀಗಾಗಿ, ಶಿವಶಂಕರಪ್ಪ ಅವರಿಗೆ ಅಕ್ರಮದ ಬಗ್ಗೆ ಮೊದಲೇ ಗೊತ್ತಿತ್ತು ಎಂದು ಇಡಿ ಹೇಳಿದೆ.

**ಪಶು ವೈದ್ಯಾಧಿಕಾರಿಗಳ ನೇಮಕಾತಿ ಪರೀಕ್ಷೆಯ ಫಲಿತಾಂಶ ಹೊರಬಿದ್ದ ತಕ್ಷಣ, ಸುಮಾರು 50ಕ್ಕೂ ಹೆಚ್ಚು ಪರೀಕ್ಷಾರ್ಥಿಗಳು ವಿಧಾನಸೌಧ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆ ಬೆನ್ನಲ್ಲೇ ಮಧ್ಯವರ್ತಿಗಳು ಪ್ರತಿ ಪಶು ವೈದ್ಯಾಧಿಕಾರಿ ಹುದ್ದೆಗೆ 70 ಲಕ್ಷದಿಂದ 80 ಲಕ್ಷದವರೆಗೆ ಲಂಚ ಕೇಳುತ್ತಿರುವ ಆಡಿಯೋ ಸಂಭಾಷಣೆಗಳು ಬಹಿರಂಗಗೊಂಡಿದ್ದವು. ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ಸರ್ಕಾರವು ಇದರ ತನಿಖೆಯನ್ನು ಸಿಐಡಿ (ಅಖಳ)ಗೆ ವಹಿಸಿತ್ತು.**

## ಬಂಧನ ಸ್ವಾಗತಾರ್ಹ ಬೆಳವಣಿಗೆ : ಯತ್ನಾಳ



ವಿಜಯಪುರ: ಕರ್ನಾಟಕ ಲೋ(ಪ)ಕ ಸೇವಾ ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರರನ್ನು ಹಾಗೂ ಆಯೋಗದ ಸದಸ್ಯೆ ಗೀತಾ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದ್ದಾರೆ.

ಆಯೋಗವನ್ನು ದಕ್ಷ ರೀತಿಯಲ್ಲಿ ಮುನ್ನೆಡೆಸಬೇಕಾಗಿದ್ದ 'ಸಾಹುಕಾರರೆ' ಈಗ ಇಡಿ ಬಲೆಗೆ ಬಿದ್ದಿದ್ದಾರೆ. ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಅಸೋಸಿಯೇಷನ್ ಅವರೊಂದಿಗೆ ಆಯೋಗದಲ್ಲಿ ನಡೆದಿರುವ ಭ್ರಷ್ಟಾಚಾರದ ತನಿಖೆಯನ್ನು ಸಿಬಿಐ ಗೆ ವಹಿಸಬೇಕೆಂದು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನಾನು ರಿಟ್ ಪಿಟಿಷನ್ ಹೂಡಿದ್ದೆ. ರಾಜ್ಯದ ಪೊಲೀಸರು ಹಾಗೂ ಸಿಐಡಿ ಇಂದ ಆಗದ ಕೆಲಸವನ್ನು ಜಾರಿ ನಿರ್ದೇಶನಾಲಯ ಅತ್ಯಂತ ಕರಾರುವಕ್ಕಾಗಿ ಕ್ಷಿಪ್ರ ಗತಿಯಲ್ಲಿ ತನಿಖೆ ಕೈಗೊಂಡಿರುವುದು ಪ್ರಶಂಸನೀಯ. ಪರೀಕ್ಷಾ ಅಕ್ರಮ ಎಸಗಿದವರಿಗೆ ಭಾರಿ ದಂಡ ಮತ್ತು ಶಿಕ್ಷೆಯಾಗಲು ಸರ್ಕಾರ ಸೂಕ್ತ ಕಾನೂನು ರೂಪಿಸಬೇಕು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ರವರು ಎಕ್ಸ್ ಖಾತೆಯಲ್ಲಿ ಟ್ವಿಟ್ ಮಾಡಿದ್ದಾರೆ.

# ಬಬಲೇಶ್ವರದಲ್ಲಿ ಸಬ್ ರಜಿಸ್ಟ್ರಾರ್ ಕಚೇರಿ ಆರಂಭಕ್ಕೆ ಆದೇಶ

■ ಥಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಬಬಲೇಶ್ವರದಲ್ಲಿ ಸಬ್ ರಜಿಸ್ಟ್ರಾರ್ ಕಚೇರಿ ಪ್ರಾರಂಭಿಸಲು ಸರಕಾರ ಆದೇಶ ಹೊರಡಿಸಿದೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ತಿಳಿಸಿದ್ದಾರೆ.



ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಬಬಲೇಶ್ವರ ಪಟ್ಟಣದಲ್ಲಿ ಉಪನೋಂದಣಾಧಿಕಾರಿ ಕಚೇರಿ ಪ್ರಾರಂಭಿಸಲು ಈ ಹಿಂದೆ ಕಂದಾಯ ಸಚಿವ-ರಿಗೆ ಪತ್ರ ಬರೆದು ಒತ್ತಾಯಿಸಿದ್ದೆ. ಈಗ ಸರಕಾರ ಸಬ್ ರಜಿಸ್ಟ್ರಾರ್ ಕಚೇರಿ ಪ್ರಾರಂಭಿಸಲು ಮತ್ತು ಕಚೇರಿಯ ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿ ಹಾಗೂ ಪೀಠೋಪಕರಣಗಳನ್ನು ಒದಗಿಸಿ ಆದೇಶ ಹೊರಡಿಸಿದೆ ಎಂದು ಅವರು ತಿಳಿಸಿದ್ದಾರೆ.

ಇದರಿಂದ ಬಬಲೇಶ್ವರ ತಾಲೂಕಿನ ರೈತರು ಮತ್ತು ಸಾರ್ವಜನಿಕರಿಗೆ ಜಮೀನು, ಕಟ್ಟಡ ಮಾರಾಟ ಮಾಡಲು ಹಾಗೂ ಖರೀದಿ ಮಾಡಲು ಅನುಕೂಲವಾಗಲಿದೆ. ನೋಂದಣಿಗೆ ವಿಜಯಪುರಕ್ಕೆ ಅಲೆದಾಡುವುದು ತಪ್ಪಲಿದೆ. ಅಲ್ಲದೇ ಸಮಯವೂ ಉಳಿತಾಯವಾಗಲಿದೆ ಎಂದು ಸಚಿವ ಎಂ. ಬಿ. ಪಾಟೀಲ ತಿಳಿಸಿದ್ದಾರೆ.

# ನಂದಿನಿ ಹಾಲಿನ ದರ ಲೀಟರ್‌ಗೆ 8 ರೂ. ಏರಿಕೆಗೆ ಸಂಪುಟ ಸಮ್ಮತಿ!

ಬೆಂಗಳೂರು: ದಸರಾಗೂ ಮುನ್ನ ರಾಜ್ಯದ ಜನತೆಗೆ ಮತ್ತೆ ಹಾಲಿನ ದರ ಏರಿಕೆಯ ಶಾಕ್ ಎದುರಾಗಿದೆ. ಪ್ರತಿ ಲೀಟರ್ ಹಾಲಿನ ದರ 10 ರೂಪಾಯಿ ಹೆಚ್ಚಿಸಬೇಕೆಂದು ಹಾಲು ಮಾರಾಟ ಒಕ್ಕೂಟಗಳು ಮನವಿ ಮಾಡಿತ್ತು. ಆದ-ರೆ ಸರ್ಕಾರ ಹಾಲಿನ ದರವನ್ನು ಪ್ರತಿ ಲೀಟರ್‌ಗೆ 8 ರೂಪಾಯಿ ಹೆಚ್ಚಿಸಲು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಒಲವು ವ್ಯಕ್ತಪಡಿಸಿದ್ದು, ಸಚಿವ ಸಂಪುಟ ಸಭೆಯಲ್ಲೂ ದರ ಏರಿಕೆಗೆ ಸಮ್ಮತಿ ದೊರೆತಿದೆ ಎಂದು ತಿಳಿದುಬಂದಿದೆ.




ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಸದ್ಯ ಹಾಲಿನ ದರ ಏರಿಕೆ ಕು-ರಿತು ಅಂತಿಮ ನಿರ್ಧಾರವನ್ನು ಮುಖ್ಯಮಂತ್ರಿಗಳ ವಿವೇಚನೆಗೆ ಬಿಡಲಾಗಿದೆ ಎನ್ನಲಾಗಿದೆ. ಇನ್ನು ಅಕ್ಟೋಬರ್ 27ರ ಬಳಿಕ ಹಾಲಿನ ದರ ಏರಿಕೆಯಾಗುವ ಸಾಧ್ಯತೆ ಇದೆ.

# ಕಬ್ಬಿಗೆ ದರ ಪ್ರಕಟಿಸದೇ ಕಬ್ಬು ಅರೆಯುವಂತಿಲ್ಲ

## ಅಧಿಕಾರಿಗಳು, ರೈತ ಮುಖಂಡರು, ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳೊಂದಿಗಿನ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಆನಂದ ಕೆ. ಸಕ್ಕರೆ ಕಾರ್ಖಾನೆಗಳಿಗೆ ಸೂಚನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯಲ್ಲಿ 2026-27 ನೇ ಸಾಲಿನ ಕಬ್ಬು ಅರೆಯುವ ಹಂಗಾಮು ಆರಂಭಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಗಳು ರೈತರ ಹಿತಾಸಕ್ತಿ ಕಾಪಾಡುವುದರ ಜೊತೆಗೆ ಆಯಾ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಸಿದ ರೈತರಿಗೆ ನಿಗದಿತ ಅವಧಿಯಲ್ಲಿ ಹಣ ಪಾವತಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಗಳಿಗೆ ಸೂಚಿಸಿದರು.



2026-27ನೇ ಸಾಲಿನ ಕಬ್ಬು ಅರೆಯುವ ಹಂಗಾಮಿಗೆ ಪೂರ್ವ ಸಿದ್ಧತೆ ಅಂಗವಾಗಿ ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲೆಯ ಎಲ್ಲಾ ಸಕ್ಕರೆ ಕಾರ್ಖಾನೆ ಮಾಲೀಕರು,ವ್ಯವಸ್ಥಾಪಕ ನಿರ್ದೇಶಕರು ಹಾಗೂ ರೈತ ಮುಖಂಡರುಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಭೆಯಲ್ಲಿ ಕಬ್ಬು ಬೆಳೆಗಾರ-ರಿಗೆ ನ್ಯಾಯೋಚಿತ ದರ, ತೂಕದಲ್ಲಿ ಪಾರದರ್ಶಕತೆ, ಕಬ್ಬು ಸಾಗಣೆ ವ್ಯವಸ್ಥೆ ಹಾಗೂ ಕಾರ್ಖಾನೆಗಳಿಂದ ಹೊರಬರುವ ತ್ಯಾಜ್ಯ ನೀರಿನ ಸಮರ್ಪಕ ನಿರ್ವಹಣೆ ಕು-ರಿತು ಕಟ್ಟುನಿಟ್ಟಿನ ಮಾರ್ಗಸೂಚಿಗಳನ್ನು ನೀಡಲಾಯಿತು.

ಜಿಲ್ಲೆಯ ಯಾವುದೇ ಸಕ್ಕರೆ ಕಾರ್ಖಾನೆಗಳು ರೈತರಿಗೆ ಪಾವತಿಸಬೇಕಾದ ಕಬ್ಬಿನ ನ್ಯಾಯಸಮ್ಮತ ಮತ್ತು ನಿಗದಿತ ದರವನ್ನು ಅಧಿಕೃತವಾಗಿ ಪ್ರಕಟಿಸದೇ ಕಬ್ಬು ಅರೆಯುವ ಕಾರ್ಯ ಆರಂಭಿಸಬಾರದು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಸ್ಪಷ್ಟಪಡಿಸಿದರು.

ಪ್ರತಿಯೊಂದು ಕಾರ್ಖಾನೆಯು ತನ್ನ ಅಧಿಕೃತ ಲೆಟರ್ ಹೆಡ್‌ನಲ್ಲಿ ರೈತರ ಖಾತೆಗೆ ಜಮೆಯಾಗುವ ನಿವ್ವಳ ಮೊತ್ತವನ್ನು ಸ್ಪಷ್ಟವಾಗಿ ಪ್ರಕಟಿಸಬೇಕು. ಕಾರ್ಖಾನೆಗಳಲ್ಲಿ ಲೈವ್ ಫೀಡಿಂಗ್ ವ್ಯವಸ್ಥೆ ಕಲ್ಪಿಸಬೇಕು. ಕಬ್ಬಿನ ತೂಕದಲ್ಲಿ ಯಾವುದೇ ರೀತಿಯ ವ್ಯತ್ಯಾಸ ಅಥವಾ ವಂಚನೆ ನಡೆಯದಂತೆ ಎಪಿಎಂಸಿ ಸೇರಿದಂತೆ ಅಲ್ಲಲ್ಲಿರುವ ಸರ್ಕಾರಿ ವೇ-ಬ್ರಿಡ್ಜ್ ಗಳ ಮೂಲಕ ನಿಯಮಿತ ತಪಾಸಣೆ ನಡೆಸಲಾಗುವುದು ಎಂದು ತಿಳಿಸಿದರು.

ನಿಯಮ ಉಲ್ಲಂಘಿಸಿ ಕಲುಷಿತ ನೀರನ್ನು ಜಲಮೂಲಗಳಿಗೆ ಹರಿಸುವ ಸಕ್ಕರೆ ಕಾರ್ಖಾನೆಗಳ ವಿರುದ್ಧ ಮಾಲಿನ್ಯ ನಿಯಂತ್ರಣ ಮಂಡಳಿ ಕಾನೂನು ರೀತ್ಯ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ಆಹಾರ ಇಲಾಖೆಯ ಉಪ ನಿರ್ದೇಶಕ ವಿನಯಕುಮಾರ ಪಾಟೀಲ್ ಮಾತನಾಡಿ, ಜಿಲ್ಲೆಯ ವಿವಿಧ ಸಕ್ಕರೆ ಕಾರ್ಖಾನೆಗಳ ಕಬ್ಬಿನ ಇಳುವರಿ ಆಧಾರದ ಮೇಲೆ ಪ್ರಸಕ್ತ ಸಾಲಿನ ನ್ಯಾಯಯುತ ಮತ್ತು ಲಾಭದಾಯಕ ಬೆಲೆ ದರ ಮಾಹಿತಿ, ಬಾಕಿ ಮೊತ್ತವನ್ನು ರೈತ-ರಿಗೆ ಶೀಘ್ರವಾಗಿ ಪಾವತಿಸುವ ಅಗತ್ಯವಿದೆ ಎಂದು ತಿಳಿಸಲಾಗಿದೆ ಎಂದು ಸಭೆಗೆ ವಿವ-ರಿಸಿದರು. ಸಭೆಯಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶಿವನಗೌಡ, ಎಸ್. ನಿಜಲಿಂಗಪ್ಪ ಶುಗರ್ ಇನ್‌ಸ್ಟಿಟ್ಯೂಟ್‌ನ ತಾಂತ್ರಿಕ ಸಲಹೆಗಾರರಾದ ಸಿ.ಬಿ. ಪಾಟೀಲ, ಇಂಡಿ ಉಪವಿಭಾಗದ ಡಿವೈ-ಎಸ್ಪಿ, ಪರಿಸರ ಇಲಾಖೆಯ ಅಧಿಕಾರಿಗಳು, ಕಾನೂನು ಮಾಪನಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕರು, ವಿವಿಧ ತಾಲೂಕುಗಳ ತಹಸೀಲ್ದಾರರು, ಪೊಲೀಸ್ ಮತ್ತು ವಿವಿಧ ಇಲಾಖೆಗಳ ಅಧಿಕಾ-ರಿಗಳು, ಸಿಬ್ಬಂದಿ ಸೇರಿದಂತೆ ಜಿಲ್ಲೆಯ ಎಲ್ಲಾ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳು ಹಾಗೂ ವಿವಿಧ ರೈತ ಸಂಘಟನೆಗಳ ಮುಖಂಡರು, ಪದಾಧಿಕಾರಿಗಳು ಭಾಗವಹಿಸಿದ್ದರು.

# ರೈತರಿಗೆ 2500 ರೂ ಬೆಳೆ ಪರಿಹಾರ ವಿರೋಧಿಸಿ ಪ್ರತಿಭಟನೆ



■ ಉದಯರಶ್ಮಿ ದಿನಪತ್ರಿಕೆ

ಇಂಡಿ: ರೈತರಿಗೆ 2500 ರೂ ಬರಗಾಲ ಪರಿಹಾರ ನೀಡುತ್ತಿರುವದು ಬೇಡ ಎಂದು ಆಗ್ರಹಿಸಿ ಇಂದು ರೈತರು ಆಡಳಿತಸೌಧದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಅಲ್ಲಿ ಮಾತನಾಡಿದ ಕರವೇ ಮುಖಂಡ ಬಾಳು ಮುಳಜಿ ಒಂದು ಎಕರೆ ಹತ್ತಿಗೆ ನಾಟಿ ಮಾಡಲು ಕನಿಷ್ಠ 15 ಸಾವಿರ ರೂ ಖರ್ಚಾಗುತ್ತದೆ. ಒಂದು ಎಕರೆ ಕಬ್ಬಿಗೆ ರೂ 25 ಸಾವಿರ ಮತ್ತು ಒಂದು ಎಕರೆ ತೊಗರಿಗೆ ರೂ 15 ಸಾವಿರ ಖರ್ಚಾಗುತ್ತದೆ ಎಂದು ಆಗ್ರಹಿಸಿ ರೈತರಿಗೆ ನೀಡುತ್ತಿರುವ ಬರಗಾಲ ಪರಿಹಾರ ಇನ್ನೊಮ್ಮೆ ಚರ್ಚಿಸಿ ನೀಡಲು ಕೇಳಿಕೊಂಡರು.

ರೈತ ಮುಖಂಡ ಮಲ್ಲು ಗುಡ್ಲ ಮಾತನಾಡಿ, ನಾವು ರೈತರು ಪ್ರತಿ ರೈತರಿಂದ ರೂ ಹತ್ತು ಸಂಗ್ರಹಿಸಿ ರೂ 2600 ರೂ ಸಂಗ್ರಹಿಸಿದ್ದು ಅದನ್ನು ಡಿ ಡಿ ಮೂಲಕ ಮುಖ್ಯಮಂತ್ರಿಯವರ ಖಾತೆಗೆ ಜಮೆ ಮಾಡಲು ಮಾನ್ಯ ಕಂದಾಯ ಉಪವಿಬಾಗಾಧಿಕಾ-ರಿಗಳಿಗೆ ಡಿ ಡಿ ನೀಡುತ್ತಿದ್ದೇವೆ ಎಂದರು.

ವಿಜಯಕುಮಾರ ರಾಠೋಡ ಮಾತನಾಡಿ ರೈತರ ಬರಗಾಲದ ಸಂಕಷ್ಟಗಳಿಗೆ ಸ್ಪಂದಿಸಿ ವೈಜ್ಞಾನಿಕ ಬೆಳೆ ಪರಿಹಾರ ಹಾಗೂ ಸಂಪೂರ್ಣ ಸಾಲ ಮನ್ನಾ ಮಾಡುವಂತೆ ಆಗ್ರಹಿಸಿ ಪರಿಹಾರ ತಕ್ಷಣ ಬಿಡುಗಡೆ ಮಾಡುವಂತೆ ಆಗ್ರಹಿಸಿದರು.

## ಇಂಡಿ ಎಸಿ ಮೂಲಕ ಮುಖ್ಯಮಂತ್ರಿ ಖಾತೆಗೆ 2600 ರೂ ಡಿಡಿ ಕಳಿಸಿ ರೈತರ ಆಕ್ರೋಶ

ಅಶೋಕ ಅಕಲಾದಿ, ಶ್ರೀಶೈಲಗೌಡ ಬಿರಾದಾರ, ಪ್ರಶಾಂತ ಲಾಳಸಂಗಿ, ಶಿವರಾಜ ಕೆಂಗನಾಳ ಮಾತನಾಡಿದರು.

ಪ್ರತಿಭಟನೆಯಲ್ಲಿ ಸೋಮಣ್ಣ ಗುಡ್ಲ, ಸಾಗರ ಬಿರಾದಾರ, ಶ್ರೀಕಾಂತ ಬಡಿಗೇರ, ಸಂತೋಷ ಬಗದುರ್ಗಿ ಆನಂದ ಮುಳಜಿ, ಹಣಮಂತ ಹೂಗಾರ, ಶಾಂತು ಲಾಳಸಂಗಿ, ದುಂಡುಗೌಡ ಬಿರಾದಾರ, ಬಲ್ಲು ಇಂಗಳೆ, ಸೈಯದ ಮುಲ್ಲಾ, ಮುದಕಪ್ಪ ಹೊಟಗಿ,ಮುತ್ತು ತಾಂಬೆ, ಪ್ರಭಾಕರ ಘೋರಪಡೆ, ಮಳಗು ಪೂಜಾರಿ, ಕೋನಪ್ಪ ಗುಡ್ಲ, ಸತೀಶ ನಿಂಬಾಳ ಮತ್ತಿತರಿದ್ದರು.

ಕಂದಾಯ ಉಪವಿಬಾಗಾಧಿಕಾರಿ ಚಿದಾನಂದ ಗುರುಸ್ವಾಮಿಯವರಿಗೆ ಮನವಿ ಪತ್ರ ಮತ್ತು ಡಿ ಡಿ ಸಲ್ಲಿಸಿದರು.

# ಜೆಜೆಎಂ ಕಾಮಗಾರಿ ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಿ

## ವಿಜಯಪುರ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಗ್ರಾಮೀಣ ಪ್ರದೇಶದ ಸಾರ್ವಜನಿಕ-ರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಜಲಜೀವನ್ ಮಿಷನ್ ಸೇರಿದಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವಿವಿಧ ಯೋಜನೆಗಳ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.



ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಅ.5ರಂದು ನಡೆದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವಿವಿಧ ಯೋಜನೆಗಳು ಹಾಗೂ ಘಟಕಾಂಶಗಳ ಪ್ರಗತಿ ಪರಿಶೀಲಿಸಿ ಅವರು ಮಾತನಾಡಿದರು.

ಟಾಸ್ಕ್‌ಫೋರ್ಸ್ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ಸರ್ಕಾರದ ಮಾರ್ಗಸೂಚಿಯಂತೆ ಸಮರ್ಪಕವಾಗಿ ಬಳಸಿಕೊಳ್ಳಬೇಕು. ಅನಗತ್ಯವಾಗಿ ಹೊಸ ಕೊಳವೆಬಾವಿಗಳನ್ನು ಕೊರೆಯಿಸುವುದನ್ನು ಕಡಿಮೆ ಮಾಡಿ, ಈಗಾಗಲೇ ಕೊರೆಯಿಸಿರುವ ಕೊಳವೆಬಾವಿಗಳಿಗೆ ಆದ-್ಯತೆಯ ಮೇರೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯವನ್ನು ತಕ್ಷಣ ಕೈಗೊಳ್ಳಬೇಕು. ಗ್ರಾಮಸ್ಥರಿಗೆ ಯಾವುದೇ ರೀತಿಯ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಗತ್ಯ ಕ್ರಮ ವಹಿಸಬೇಕು ಎಂದು ಸೂಚಿಸಿದರು.

ತಾಲೂಕು ಮಟ್ಟದಲ್ಲಿ ಕುಡಿಯುವ ನೀರಿನ ಪರಿಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಉಪವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾ-ರಿಗಳು ಸಮನ್ವಯದಿಂದ ಪ್ರತಿ ವಾರ ಸಭೆ ನಡೆಸಬೇಕು. ಸಮಸ್ಯಾತ್ಮಕ ಗ್ರಾಮಗಳನ್ನು ಗುರುತಿಸಿ, ಅಗತ್ಯ ಪರಿಹಾರ ಕ್ರಮಗಳನ್ನು ತಕ್ಷಣ ಕೈಗೊಳ್ಳಬೇಕು. ಅಂತಹ ಗ್ರಾಮಗಳ ಪಟ್ಟಿಯನ್ನು ಸಿದ್ಧಪಡಿಸಿ ಜಿಲ್ಲಾ ಪಂಚಾಯತಿಗೆ ತುರ್ತಾಗಿ ವರದಿ ಸಲ್ಲಿಸುವಂತೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ವರ್ಧಮಾನ ಗೊಂಗಡಿ, ಇಲಾಖೆಯ ವಿವಿಧ ಉಪವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಜಲಧಾರೆ ಯೋಜನೆಯ ಪಿಎಂಸಿ ತಂಡದ ನಾಯಕರು ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತ-ರಿದ್ದರು.

### 841 ಜಲಜೀವನ್ ಮಿಷನ್ ಕಾಮಗಾರಿಗಳು ಪೂರ್ಣ

**ಜಿಲ್ಲೆಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಅನುಷ್ಠಾನಗೊಳ್ಳುತ್ತಿರುವ ಒಟ್ಟು 1,000 ಕಾಮಗಾರಿಗಳ ಪೈಕಿ 841 ಕಾಮಗಾರಿಗಳು ಪೂರ್ಣಗೊಂಡಿವೆ. ಬಾಕಿ ಉಳಿದಿರುವ ಕಾಮಗಾರಿಗಳನ್ನು ಯಾವುದೇ ವಿಳಂಬವಿಲ್ಲದೆ ವೇಗಗೊಳಿಸಿ, ಡಿಸೆಂಬರ್ 2026ರ ಅಂತ್ಯದೊಳಗೆ ಭೌತಿಕವಾಗಿ ಪೂರ್ಣಗೊಳಿಸಬೇಕು ಎಂದು ಆನಂದ್ ಪ್ರಕಾಶ್ ಮೀನಾ ಸೂಚಿಸಿದರು.**

# ಬೆತ್ತಲೆಯಾಗಿ ಜೀವಿಸುವ ಗ್ರಾಮ




ಸಂತೋಷ್ ರಾವ್ ಪೆರ್ಮುಡ.
ಪಟ್ರಮೆ ಗ್ರಾಮ ಮತ್ತು ಅಂಚೆ
ಬೆಳ್ತಂಗಡಿ – ದ.ಕ ಜಿಲ್ಲೆ

■ ಉದಯರಶ್ಮಿ ದಿನಪತ್ರಿಕೆ

ಮನುಷ್ಯನು ತನ್ನ ದೇಹವನ್ನು ಮುಚ್ಚಲು ಧರಿಸುವ ವಿವಿಧ ರೀತಿಯ ವಸ್ತುಗಳನ್ನು ಬಟ್ಟೆ ಎಂದು ಕರೆಯುತ್ತೇವೆ. ಮನುಷ್ಯನ ದೇಹವನ್ನು ಬಾಹ್ಯ ಪರಿಸರದಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು ಮತ್ತು ನಮ್ಮ ದೇಹವನ್ನು ಬೆಚ್ಚಗಾಗಿ ಇಟ್ಟುಕೊಳ್ಳಬೇಕು. ಆದಿಮಾನವನು ತನ್ನ ದೇಹವನ್ನು ಮುಚ್ಚಲು ಮರದ ಎಲೆಗಳು, ತೊಗಟೆ ಮತ್ತು ಪ್ರಾಣಿಗಳ ಚರ್ಮವನ್ನು ಸುತ್ತಿಕೊಳ್ಳುತ್ತಿದ್ದನು. ಮನುಷ್ಯನು ಬಟ್ಟೆಗಳ ರೀತಿಯ ವಸ್ತುಗಳನ್ನು ಮಾನವನ್ನು ಮುಚ್ಚಿಕೊಳ್ಳಲು ಬಟ್ಟೆಯ ರೀತಿ ಬಳಸಲು ಪ್ರಾಂಭಿಸಿದ ಕುರಿತು ಸುಮಾರು ಒಂದು ಮಿಲಿಯನ್ ವರ್ಷಗಳ ಹಿಂದೆ ಉಲ್ಲೇಖಗಳು ಇತಿಹಾಸದ ಪುಟಗಳನ್ನು ತಿರುವಿದಾಗ ದೊರೆಯುತ್ತದೆ.

ಬಹುಶಃ ಮರದ ತೊಗಟೆ, ಪ್ರಾಣಿಗಳ ಚರ್ಮ ಮತ್ತು ಎಲೆಗಳೇ ಮನುಷ್ಯನ ಮೊದಲ ಉಡುಗೆ ಎನ್ನಬಹುದು. ಈಗ ಬಟ್ಟೆ ಮತ್ತು ಉಡುಪುಗಳು ಮಾನವ ನಾಗರಿಕತೆಯ ಮುಖ್ಯ ಸಂಕೇತ ಆಗಿಬಿಟ್ಟಿದೆ. ಬಟ್ಟೆ ಎಂದರೆ ದೇಹವನ್ನು ಮುಚ್ಚಲು ಅಥವಾ ದೇಹದ ಮೇಲೆ ಧರಿಸಲು ಉದ್ದೇಶಿಸಿರುವ ಹೊದಿಕೆಗಳು ಅಥವಾ ಬಳಸುವ ವಸ್ತುಗಳು ಎನ್ನುವ ಅರ್ಥವಿದೆ. ನಾಗರಿಕತೆಯ ಬೆಳೆದಂತೆಲ್ಲಾ ಮನುಷ್ಯನು ಸಭ್ಯತೆ, ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು, ಆಡಂಬರ ಮತ್ತು ಸೌದರ್ಯವನ್ನು ತೋರ್ಪಡಿಸಲು ಬಟ್ಟೆಗಳ ಪ್ರಾಮುಖ್ಯತೆಯೂ ಹೆಚ್ಚುತ್ತಾ ಹೋಗುತ್ತಿದೆ. ಇಂದು ಬಟ್ಟೆಯು ಮಾನವ ಜೀವನದ ಮೂಲಭೂತ ಅಗತ್ಯಗಳಲ್ಲಿ ಒಂದಾಗಿದೆ.






ಇಂದು ಬಟ್ಟೆ ಧರಿಸದ ಮನುಷ್ಯನನ್ನು ಊಹಿಸಲೂ ಸಾಧವಿಲ್ಲ, ಎಲ್ಲೇ ಹೊರಗಡೆ ಹೋಗುವುದಿದ್ದರೂ ಬಟ್ಟೆ ಧರಿಸಿಯೇ ಹೋಗುತ್ತಾರೆ. ಆದರೆ ಯುರೋಪ್‌ನ ಬ್ರಿಟನ್‌ನಲ್ಲಿ ಒಂದು ರಹಸ್ಯ ಗ್ರಾಮವಿದೆ ಅಲ್ಲಿ ಜನರು ಸಾಕಷ್ಟು ಹಣ ಮತ್ತು ಐಷಾರಾಮಿ ಜೀವನಶೈಲಿ ಇದ್ದರೂ ಹಲವಾರು ವರ್ಷಗಳಿಂದ ಬಟ್ಟೆಯನ್ನೇ ಧರಿಸದೇ ಬದುಕುತ್ತಿದ್ದಾರೆ. ಯುರೋಪಿಯನ್ನರು ಮೊದಲು ನಾಗರೀಕರಾದರು, ನಂತರ ಅವರನ್ನು ನೋಡಿ ಜಗತ್ತು ನಾಗರೀಕವಾಯಿತು ಎಂದು ಇತಿಹಾಸ ಹೇಳುತ್ತದೆ. ಆದರೆ ಯುರೋಪಿನ ಈ ಒಂದು ಗ್ರಾಮದ ಜನರು ಆಫ್ರಿಕಾದ ಕೆಲವು ಬುಡಕಟ್ಟು ಜನರಂತೆ ಬೆತ್ತಲೆಯಾಗಿ ವಾಸಿಸುತ್ತಾರೆ. ಬ್ರಿಟನ್ ಹರ್ಟ್ ಫೋರ್ಡ್ ಶೈರ್ ಕೌಂಟಿಯ ಸ್ಪೀಲ್ ಪ್ಲಾಟ್ಸ್. ಗ್ರಾಮದ ಜನರು ವರ್ಷಪೂರ್ತಿ ಬಟ್ಟೆ ಧರಿಸದೆಯೇ ನಗ್ನರಾಗಿ ಜೀವನ ಸಾಗಿಸುತ್ತಿದ್ದಾರೆ. ಕಳೆದ ತೊಂಬತ್ತು ವರ್ಷಗಳಿಂದ ಈ ವಿಚಿತ್ರ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿರುವ ಈ ಹಳ್ಳಿಯ ಜನರು ಬಟ್ಟೆಯೇ ಇಲ್ಲದೆ ಜೀವನ ನಡೆಸುತ್ತಿದ್ದಾರೆ. ಜರಾವಾ, ಹಿಂಬಾ ಮತ್ತು ಸೆಂಟಿನೆಲ್ ಎನ್ನುವ ಬುಡಕಟ್ಟು ಜನರು ಇಂದಿಗೂ ಬಟ್ಟೆಗಳನ್ನು ಧರಿಸುವುದಿಲ್ಲ.

ಆದರೆ ತಾವು ವಿಶ್ವದ ಅತ್ಯಂತ ಸುಸಂಸ್ಕೃತರು ಎಂದು ಯುರೋಪ್ ದೇಶದ ಜನರು ಹೇಳಿಕೊಳ್ಳುತ್ತಾರೆ. ಆದರೆ ಈ ಒಂದು ಹಳ್ಳಿಯ ಜನರು ನಗ್ನರಾಗಿಯೇ ವಾಸಿಸುತ್ತಾರೆ. ಈ ಊರಿನ ಜನರೆಲ್ಲ ಬಡವರು ಅಥ–'ವಾ ಧರಿಸಲು ವಸ್ತ್ರವಿಲ್ಲ ಎಂದಲ್ಲ. ಬದಲಿಗೆ ಇದು ಈ ಊರಿನಲ್ಲಿ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ.

ನಮ್ಮ ದೇಶದಲ್ಲಿ ವರ್ಷಕ್ಕೆ 5 ದಿನ ಮಹಿಳೆಯರು ಬಟ್ಟೆ ಧ–ರಿಸದ ಗ್ರಾಮವೊಂದಿದೆ. ಅದು ಹಿಮಾಚಲ ಪ್ರದೇಶದ ಮಣಿಕರ್ಣ ಕಣಿವೆಯ ಪಿನಿ ಗ್ರಾಮದಲ್ಲಿ ವಾಸಿಸುವ ಮಹಿಳೆಯರು ವರ್ಷದಲ್ಲಿ 5 ದಿನಗಳ ಕಾಲ ಬೆತ್ತಲೆಯಾಗಿ ರುತ್ತಾರೆ. ಈ ಸಂಪದ್ಧತಿಯನ್ನು



ಇಲ್ಲಿನ ಮಹಿಳೆಯರು ಶ್ರಾವಣ ಮಾಸದ ಸಂದರ್ಭದಲ್ಲಿ ಅನುಸ–ರಿಸುತ್ತಾರೆ. ಈ 5 ದಿನಗಳ ಅವಧಿಯಲ್ಲಿ ಮಹಿಳೆಯರು ಪುರುಷರ ಮುಂದೆ ಬರುವುದಿಲ್ಲ, ಮನೆಗೆ ಬೀಗ ಹಾಕುವುದಿಲ್ಲ ಮತ್ತು ಯಾರನ್ನು ನೋಡಿಯೂ ಮುಗುಳ್ನಗೆ ಬೀರುವುದಿಲ್ಲ. ಈ ಪದ್ಧತಿಯನ್ನು ಹಲವು ಶತಮಾನಗಳ ಕಾಲದಿಂದಲೂ ಅನುಸರಿಸಿಕೊಂಡು ಬಂದಿದ್ದಾರೆ.

ಇಲ್ಲಿ ಜನರು ಶ್ರೀಮಂತ–ಬಡವ,, ಗಂಡು–ಹೆಣ್ಣು ಮೇಲ್ಜಾತಿ–ಕೆಳಜಾತಿ ಎನ್ನುವ ಭೇದವಿಲ್ಲದೇ ಹೆಂಗಸರು, ಗಂಡಸರು, ಮಕ್ಕಳು ಎಲ್ಲರೂ ನಗ್ನರಾಗಿಯೇ ಜೀವನ ಸಾಗಿಸುತ್ತಿದ್ದಾರೆ. ಇಲ್ಲಿನ ಜನರು ಉತ್ತಮ ಜ್ಞಾನಿಗಳು ಮತ್ತು ಸಿರಿವಂತರು ಆಗಿದ್ದು, ಸಾಮಾನ್ಯರಂತೆ ಈ ಗ್ರಾಮದ ಜನರೂ ಕ್ಲಬ್, ಪಬ್, ಈಜುಕೊಳಗಳನ್ನು ಬಳಸುತ್ತಾರೆ. ಆದರೆ, ಇಲ್ಲಿನ ಗ್ರಾಮಸ್ಥರು ಬಟ್ಟೆ ಮಾತ್ರ ಖರೀದಿಸುವುದಿಲ್ಲ ಮತ್ತು ಧರಿಸುವುದಿಲ್ಲ. ಮಕ್ಕಳು–ವೃದ್ಧರು, ಹೆಂಗಸರು–ಪುರುಷರು, ಎಲ್ಲರೂ ಬಟ್ಟೆಯಿಲ್ಲದೆ ಬದುಕುತ್ತಾರೆ. ಇದು ಅಲ್ಲಿನ ಜನರಿಗೆ ಯಾವುದೇ ರೀತಿಯ ತೊಂದರೆಗಳನ್ನು ಉಂಟುಮಾಡುವುದಿಲ್ಲ. ಆದರೆ ಇಲ್ಲಿನ ಜನರು ತಮ್ಮ ಹಳ್ಳಿಯನ್ನು ಬಿಟ್ಟು ಪಟ್ಟಣಗಳಿಗೆ ಹೋಗುವಾಗ ಬಟ್ಟೆಯನ್ನು ಧರಿಸುತ್ತಾರೆ. ಅದೇ ರೀತಿ ಪಟ್ಟಣದಿಂದ ಮರಳಿ ಬಂದ ತಕ್ಷಣ ಅವರು ಮತ್ತೆ ಬಟ್ಟೆ ಇಲ್ಲದೆ ನಗ್ನರಾಗಿ ಬದುಕಲು ಪ್ರಾರಂಭಿಸುತ್ತಾರೆ.

ಇಲ್ಲಿನ ಜನರು ತಾವು ಬಂಧನಗಳಿಂದ ಮುಕ್ತವಾಗಿ ಮತ್ತು ಹಾಯಾಗಿ ಇರುವ ಉದ್ದೇಶದಿಂದ ಈ ರೀತಿ ಮಾಡುತ್ತಿದ್ದಾರೆ. ಈ ಹಳ್ಳಿಯ ಜನರು ಪರಸ್ಪರ ಒಬ್ಬರಿಗೊಬ್ಬರು ಬೆರೆಯುತ್ತಾರೆ. ಪ್ರಾರಂಭಿಕ ದಿನಗಳಲ್ಲಿ ಈ ಹಳ್ಳಿಗರ ಇಂತಹ ವಿಚಿತ್ರ ಪದ್ಧತಿಯ ಅನುಸರಣೆ ಮತ್ತು ಸಂಪ್ರದಾಯವನ್ನು ಕೆಲವು ಸಾಮಾಜಿಕ ಸಂಘಟನೆಗಳು ವಿರೋಧ ಮಾಡುತ್ತಿದ್ದವು. ಆದರೆ ಪ್ರಸ್ತುತ ಈ ಪದ್ಧತಿಯ ಬಗ್ಗೆ ಯಾರೂ ಏನನ್ನೂ ಹೇಳುತ್ತಿಲ್ಲ. ಆದರೆ ಈ ಹಳ್ಳಿಯ ಜನರು ತೀರಾ ಚಳಿಯ ಸಂದರ್ಭಗಳಲ್ಲಿ ಬಟ್ಟೆಯನ್ನು ಧರಿಸಬಹುದು. ಅವರು ಬಟ್ಟೆ ಧ–ರಿಸುವುದು ಅಥವಾ ಧರಿಸದೇ ಇರುವುದನ್ನು ತಡೆಯುವುದು ಅಥವಾ ಒತ್ತಡ ಹಾಕುವುದನ್ನು ಇಲ್ಲಿನ ಜನರು ಯಾವತ್ತೂ ಮಾಡುವುದಿಲ್ಲ. ಈ ನಿರ್ಧಾರವು ಅವರಿಗೇ ಮುಕ್ತವಾಗಿರುತ್ತದೆ. ಇಲ್ಲಿಗೆ ಭೇಟಿ ನೀಡಲೆಂದು ತೆರಳುವ ಪ್ರವಾಸಿಗರು ಅಲ್ಲಿಯೇ ಉಳಿದುಕೊಳ್ಳುವುದಿದ್ದಲ್ಲಿ ಅವರೂ ನಗ್ನರಾಗಿಯೇ ಇರಬೇಕು ಎನ್ನುವ ನಿಯಮವಿದೆ.

ಈ ಗ್ರಾಮದಲ್ಲಿ ಯಾವುದೇ ಮೂಲ ಸೌಕರ್ಯಗಳ ಕೊರತೆ ಇಲ್ಲ. ಬ್ರಿಟನ್‌ನ ಇತರ ಭಾಗಗಳಂತೆ, ಇಲ್ಲಿಯ ಸ್ಥಿತಿಯೂ ತೀರಾ ಮುಂದುವರಿದಿದೆ. ಇಲ್ಲಿನ ಪ್ರತಿಯೊಂದು ಮನೆಗಳು ಎರಡು ಬೆಡ್ ರೂಂ ಮನೆಗಳಾಗಿದ್ದು, ಇದರ ಬೆಲೆ ಕನಿಷ್ಟ 85,000 ಯುರೋಪಿಯನ್ ಪೌಂಡ್‌ಗಿಂತಲೂ ಹೆಚ್ಚಿದೆ ಎಂದು ದಿ ಮಿರರ್ ಉಲ್ಲೇಖಿಸಿದೆ. ಆದರೆ



ಈ ಸಂಪ್ರದಾಯವನ್ನು ನಂಬುವ ಜನರು ಬಟ್ಟೆ ಇಲ್ಲದೆ ವಾಸಿಸುತ್ತಾರೆ. ದಿ ಮಿರರ್.ಕಾಂ ವೆಬ್‌ಸೈಟ್ ಪ್ರಕಾರ ಈ ಗ್ರಾಮವು ಹರ್ಟ್ಫೋರ್ಡ್‌ಶೈರ್ ಬಳಿ ಇದ್ದು, ಈ ಗ್ರಾಮದ ಜನರು ನಗ್ನತೆ ಎನ್ನುವ ಪದ್ಧತಿಯನ್ನು ಕಟ್ಟುನಿಟ್ಟಾಗಿ ಆಚರಿಸುತ್ತಾರೆ. ಇಲ್ಲಿನ ಮನೆಗಳು ಒಂದನ್ನು ಇನ್ನೊಂದು ಮೀರಿಸುವಂತೆ ಭವ್ಯ ಮತ್ತು ಐಷಾರಾಮಿ ಆಗಿದ್ದು, ಈ ಗ್ರಾಮದಲ್ಲಿ ಬಾರ್ ಕೂಡ ಇದೆ. ಸ್ಪೀಲ್‌ಪ್ಲಾಟ್ಜ್ ಗ್ರಾಮವು ಸದಾ ಚರ್ಚೆಯ ಕೇಂದ್ರ ಬಿಂದುವಾಗಿದ್ದು, ಹೊರ ಪ್ರದೇಶದ ಜನರು ಇಲ್ಲಿಗೆ ಬಂದು ಛಾಯಾಚಿತ್ರಗಳನ್ನು ತೆಗೆದುಕೊಂಡು ಸಾಕ್ಷ್ಯಚಿತ್ರಗಳನ್ನೂ ಮಾಡಿದ್ದಾರೆ. ಇಲ್ಲಿನ ಜನರ ಬಗ್ಗೆಯೂ ಕೆಲವು ಕಿರುಚಿತ್ರಗಳನ್ನು ಮಾಡಲಾಗಿದೆ. ಈ ಗ್ರಾಮದ ಹೆಸರಾದ ಸ್ಪೀಲ್‌ಪ್ಲಾಟ್ಜ್ ಇದರ ಅರ್ಥ 'ಆಟದ ಮೈದಾನ'.

ಈ ಹಳ್ಳಿಯ ಜನರು ಪ್ರಪಂಚದ ಇತರ ಭಾಗದಿಂದ ದೂರವಾಗಿದ್ದು, ಇವರು ಪ್ರಪಂಚದೊಂದಿಗೆ ಸಂಪರ್ಕ ಹೊಂದಿಲ್ಲ. ಜಗತ್ತಿನ ವಿವಿಧ ದೇಶಗಳ ಜನರು ಇಲ್ಲಿಗೆ ಭೇಟಿ ನೀಡುತ್ತಾರೆ. ಅಪೋಸ್ಟ್ ಮ್ಯಾನ್‌ಗಳು, ಆನ್ಲೈನ್ ವಿತರಣೆಯ ಡೆಲಿವರಿ ಬಾಯ್‌ಗಳೂ ಇಲ್ಲಿಗೆ ಬರುತ್ತಾರೆ. ಈ ಗ್ರಾಮವು ಬ್ರಿಟನ್‌ನ ಅತ್ಯಂತ ಹಳೆಯ ವಸಾಹತು. ಸ್ಪೀಲ್‌ಪ್ಲಾಟ್ಜ್ ಹಳ್ಳಿಯ ವಿಚಿತ್ರ ಬದುಕನ್ನು ಸಂತಸದಿಂದ ಕಳೆಯುತ್ತಿರುವವರಲ್ಲಿ 82 ವರ್ಷದ ಐಸಲ್ಟ್ ರಿಚರ್ಡ್ಸನ್ ಎಂಬ ಹಿರಿಯರೂ ಇದ್ದಾರೆ. ಇವರ ತಂದೆ 1929 ರಲ್ಲಿ ಈ ಸಮುದಾಯವನ್ನು ಸ್ಥಾಪಿಸಿದ್ದು, ಅವರು ರಸ್ತೆಯಲ್ಲಿ ವಾಸಿಸುವ ಜನರು ಮತ್ತು ನೈಸರ್ಗಿಕ ಜೀವನ ನಡೆಸುವವರ ಮಧ್ಯೆ ಯಾವುದೇ ದೊಡ್ಡ ಮಟ್ಟದ ವ್ಯತ್ಯಾಸ ಇಲ್ಲ ಎಂದು ಅವರು ಹೇಳುತ್ತಿದ್ದರು.

ಇಲ್ಲಿ ಎಲ್ಲರೂ ಸಾಮಾನ್ಯರಂತೆ ಜೀವನವನ್ನು ನಡೆಸುತ್ತಾರೆ, ಈ ಹಳ್ಳಿಗೆ ಪ್ರತಿದಿನ ಹಾಲಿನವನು ಹಾಲು ಹಾಕುತ್ತಾನೆ, ಮತ್ತು ಪೇಪರ್ ಬಾಯ್ ಪೇಪರ್ ಹಾಕುತ್ತಾನೆ. ಅಂಚೆಯವನು ಮತ್ತು ವ್ಯಾಪಾರಿಗಳು ಈ ಹಳ್ಳಿಯ ಬಗ್ಗೆ ತಿಳಿದಿದ್ದು, ಇಲ್ಲಿ ವ್ಯವಹಾರವನ್ನು ಮಾಡುತ್ತಾರೆ. ಅಲ್ಲದೇ ಇಲ್ಲಿನ ಪದ್ಧತಿಯನ್ನು ಕಂಡು ವಿಚಲಿತರಾಗುವುದಿಲ್ಲ. 1929 ರಲ್ಲಿ 500 ಪೌಂಡ್‌ಗೆ 12 ಎಕರೆ ನಿವೇಶನವನ್ನು ಖರೀದಿಸಿದ ಐಸೊಲ್ಟ ತಂದೆ ಚಾರ್ಲ್ಸ್ ಮಕಾಸ್ಕಿ ಈ ಗ್ರಾಮವನ್ನು ಸ್ಥಾಪಿಸಿದರು. ಇಲ್ಲಿ ಸುಮಾರು 34 ಮಂದಿ ಮಾಲೀಕರ ಸ್ಮಾರ್ಟ್ ಬಂಗಲೆಗಳಿದ್ದು, ಬೇಸಿಗೆಯಲ್ಲಿ ಇಲ್ಲಿಗೆ ಆಗಮಿಸುವ ಸಂದರ್ಶಕರಿಗೆ 24 ಬಾಡಿಗೆ ಮನೆಗಳೂ ಇವೆ. ಇಲ್ಲಿನ ಮನೆಗಳು ಎರಡು ಬೆಡ್ ರೂಂ ಮನೆಗಳಾಗಿದ್ದು, ವಿದ್ಯುತ್ ಸಂಪರ್ಕ, ನೀರು ಮತ್ತು ಒಳಚರಂಡಿ ಮುಂತಾದ ಅತ್ಯಾಧುನಿಕ ವ್ಯವಸ್ಥೆಗಳಿಂದ ಕೂಡಿದೆ. ಹಳ್ಳಿಯ ಮುಖ್ಯಭಾಗದಲ್ಲಿ ಕ್ಲಬ್ ಹೌಸ್ ಇದ್ದು, ಇಲ್ಲಿ ಇಲ್ಲಿನ ನಿವಾಸಿಗಳು ಡಿಸ್ಕೋ, ಕ್ಯಾರಿಯೋಕೆ ಸೆಷನ್‌ಗಳು, ರಸಪ್ರಶ್ನೆ ಮತ್ತು ಪೂಲ್ ಪಂದ್ಯಗಳಿಗೆ ಒಟ್ಟು ಸೇರುತ್ತಾರೆ. ಇಲ್ಲಿನ ರಸ್ತೆಗಳು ಸಹಿರಿನಿಂದ ಕೂಡಿದ ಸಾಲು ಮರಗಳಿಂದ ಕೂಡಿದೆ.

ಇಲ್ಲಿ ಮನೆಗಳನ್ನು ಖರೀದಿಸಲು ಇತರರಿಗೂ ಅವಕಾಶವಿದ್ದು, ಇಲ್ಲಿ ಜೀವನ ಮಾಡಬೇಕೆಂದರೆ ಎಲ್ಲರೂ ನಗ್ನರಾಗಿಯೇ ಇರಬೇಕು ಎನ್ನುವ ನಿಯಮವಿದೆ. ಇಸೆಲ್ಟ್ ಅವರ ಪ್ರಕಾರ, ಇಲ್ಲಿ ಆಸ್ತಿಯನ್ನು ಖರೀದಿಸುವ ಎಲ್ಲರೂ ಕನಿಷ್ಟ ಒಂದು ವರ್ಷದವರೆಗೆ ಅರೆಕಾಲಿಕ ಸದಸ್ಯರಾಗಿರುತ್ತಾರೆ. ಒಟ್ಟಾರೆಯಾಗಿ ಆಧುನೀಕತೆಯು ಬೆಳೆದಂತೆಲ್ಲಾ ಒಂದು ಹಂತದವರೆಗೆ ಮಾನವ ಮೈಪೂರ್ತಿ ಮುಚ್ಚುವ ಬಟ್ಟೆಗಳನ್ನು ಧರಿಸುತ್ತಿದ್ದ. ಮತ್ತೆ ಇಂದು ಆಧುನೀಕತೆಯ ಗಾಳಿಯಲ್ಲಿ ಮನುಷ್ಯನ ಮೈ ಮುಚ್ಚುವ ಬಟ್ಟೆಯೇ ಕಡಿಮೆಯಾಗುತ್ತ ಸಾಗಿದೆ. ಇಂತಹ ಬೆಳವಣಿಗೆಗಳ ನಡುವೆಯೇ ಒಊರ್ತಿ ಗ್ರಾಮದ ಜನರೇ ಸಂಪೂರ್ಣ ಬೆತ್ತಲಾಗಿಯೇ ಇದ್ದು ಜೀವನ ಸಾಗಿಸುತ್ತಿರುವುದು ಇಂದಿನ ದಿನಗಳಲ್ಲಿ ಬಹುಶಃ ಅಚ್ಚರಿ ಮತ್ತು ಕುತೂಹಲದ ವಿಚಾರ.



## ಯುವ ಸಂಸತ್ತು ಕಾರ್ಯಕ್ರಮಕ್ಕೆ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ

ಬಸವನ ಬಾಗೇವಾಡಿ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಅ.4 ರಂದು ಬಸವ ಭವನದಲ್ಲಿ ಜರುಗಿದ ಬಸವನ ಬಾಗೇವಾಡಿ ತಾಲೂಕ ಮಟ್ಟದ "ಯುವ ಸಂಸತ್ತು" ಕಾರ್ಯಕ್ರಮದ ಆಯ್ಕೆ ಪ್ರಕ್ರಿಯೆಯಲ್ಲಿ ಉತ್ತಮ ಪ್ರದರ್ಶನ ತೋರಿದ 34 ವಿದ್ಯಾರ್ಥಿಗಳು ಅ.8 ರಂದು ಅಂತಿಮ ಹಂತದ "ಯುಥ್ ಪಾರ್ಲಿಮೆಂಟ್" ಕಾರ್ಯಕ್ರಮಕ್ಕೆ ಆಯ್ಕೆಗೊಂಡಿದ್ದಾರೆ.

ಈ ಎಲ್ಲ ವಿದ್ಯಾರ್ಥಿಗಳಿಗೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಹೆಚ್.ಎಂ. ನಾಟೀಕಾರ, ಪ್ರೊ. ಇಸ್ಮಾಯಿಲ್ ಶಪಿಯುಲ್ಲಾ & ಪ್ರೊ. ನಂದಪ್ಪ ಬಿರಾದಾರ ಇವರು ಮಾರ್ಗದರ್ಶನ ಮಾಡಿದ್ದರು.

ಯುವ ಸಂಸತ್ತು ಕಾರ್ಯಕ್ರಮಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕಾಲೇಜಿನ ಪ್ರಾಂಶುಪಾಲರಾದ ಡಾ. ನೀಲಪ್ಪ ಹೊಸಮನಿ ಹಾಗೂ ಎಲ್ಲ ಬೋಧಕ–ಬೋಧಕೇತರ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ನೆಲಮೂಲ ಸಾಹಿತ್ಯ ರಾಜ್ಯ ಯುವ ಗೋಷ್ಠಿ ಸಂಪನ್ನ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಭಾರತೀಯ ಸಾಹಿತ್ಯಗಳ ತಾಯಿಬೇರು ಮಹಾಭಾರತ ಮತ್ತು ರಾಮಾಯಣ. ಅದು ಭಾರತೀಯ ಸಾಹಿತ್ಯಕ್ಕೆ ರಾಜಮಾರ್ಗ ಅದರ ಆಧಾರದ ಮೇಲೆ ಮಾತನಾಡಿದ ಯುವಕರ ಆಸಕ್ತಿ ಮತ್ತು ಅಧ್ಯಯನ ಅತ್ಯಂತ ಖುಷಿ ತಂದಿದೆ ಎಂದು ಪ್ರೊ.ಸುಮಾ ಸಾವಂತ್ ಹೇಳಿದರು

ಭಾನುವಾರ ನಗರದ ಭಾವಸಾರ ಕ್ಷತ್ರೀಯ ಸಾಂಸ್ಕೃತಿಕ ಭವನ ಆನಂದ ನಗರದಲ್ಲಿ ನಡೆದ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಆಯೋಜನೆಯ ನೆಲಮೂಲ ಸಾಹಿತ್ಯ – ಚರಿತ್ರೆ, ತಾತ್ವಿಕತೆ ಮತ್ತು ಪ್ರಸ್ತುತೆ ಎಂಬ ರಾಜ್ಯ ಮಟ್ಟದ ಯುವ ಗೋಷ್ಠಿಯ ಸಮಾರೋಪದಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ರಾಜ್ಯಾಧ್ಯಕ್ಷ ಎಸ್.ಜಿ. ಕೋಟಿ ಅವರು, ಯುವ ಜನತೆ ಧ್ವನಿ ಸಮಾಜವನ್ನು ತಲುಪಬೇಕು. ಅಖಿಲ ಭಾರತೀಯ ಸಾಹಿತ್ಯ ಪರಿಷತ್ತು ಯುವಕರಲ್ಲಿ ನೈಜ ಸಾಹಿತ್ಯದ ಪ್ರೇರಣೆಯನ್ನು ನೀಡುವ ಪ್ರಯತ್ನ ಮಾಡಲಾಗಿದೆ ಎಂದು ಅಭಿಪ್ರಾಯ ಪಟ್ಟರು. ಕಾರ್ಯಕ್ರಮದಲ್ಲಿ ಪರಿಷದ್ ನ ರಾಜ್ಯ ಕಾರ್ಯಕಾರಿಣಿ ಸದಸ್ಯೆ ಶ್ರೀಮತಿಮಾಯಾಬಾಲಚಂದ್ರಅತಿಥಿಮಾತುಗಳನ್ನಾಡಿದರು.

ಯುವಗೋಷ್ಠಿಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬಂದ 15 ಯುವ ಸಾಹಿತ್ಯಾಭ್ಯಾಸಿಗಳು ನೆಲಮೂಲದ ಸಾಹಿತ್ಯದ ಕುರಿತು ವಿಚಾರ ಮಂಡನೆ ಮಾಡಿದರು.

ನಿರೂಪಣೆ ರಾಮು , ಸ್ವಾಗತ ಮಯೂರ ತಿಳಗೂಳಕರ , ವಂದನಾರ್ಪಣೆ ಅಭಾಸಾಪ ಜಿಲ್ಲಾಧ್ಯಕ್ಷರಾದ ವಿವೇಕ್ ಕುಲಕರ್ಣಿ ನಿರ್ವಹಿಸಿದರು. ವಂದೇ ಮಾತರಂ ಗೀತೆಯನ್ನು ಬಲವಂತ ಕುಲಕರ್ಣಿ ಹಾಡಿದರು.

ಕಾರ್ಯಕ್ರಮದಲ್ಲಿ ಆನಂದ ಗೋಡಸೆ, ಯುವ ಪ್ರಕಾರ ಪ್ರಮುಖರಾದ ಡಾ. ರಾಹುಲ್ ಮರಳಿ , ಶ್ರೀರಂಗ ಕುಲಕರ್ಣಿ , ನಾರಾಯಣ ಶೇವರೆ , ಗಣೇಶ ಅಡಿಗ , ಸುಕಾಂತ ಕುಲಕರ್ಣಿ ,ಶಿವಶರಣ ಗೋಡ್ರಾಲ್ , ಶ್ರೀರಂಜನಿ ದತ್ತಾತ್ರಿ , ಅಶೋಕ ರಾಯ್ಕರ್ , ಚಂದ್ರಿಕಾ ಬಳ್ಳಾರಿ , ಶ್ರೀರಂಗ ಪುರಾಣಿಕ , ಮಾಧುರಿ ಕುಲಕರ್ಣಿ ,ಭಾರತಿ ಗೋಡಸೆ ,ಚಿದಂಬರ ಪಾಟೀಲ , ಪ್ರಿಯಾ ಹರಿದಾಸ ,ಅನಿಲ ಬೆಳುಂಡಗಿ ,ಶಂಕರ ಮಳ್ಳಿ , ಸುಭಾಸ ಕನ್ನೂರ , ಸುಭಾಷ ಯಾದವಾಡ ಸೇರಿ ಅನೇಕರು ಉಪಸ್ಥಿತರಾಗಿದ್ದರು.

### ಗದಗದಲ್ಲಿ ನಡೆದ ಲಿಂ.ರುದ್ರಪ್ಪನವರು ಮತ್ತು ಸರೋಜಮ್ಮ ಪಟ್ಟಣ ದಂಪತಿಗಳ ಸ್ಮರಣೋತ್ಸವ ಕಾರ್ಯಕ್ರಮ

## ಸ್ಮರಣೆಯ ಬೆಳಕಿನಲ್ಲಿ ಶರಣ ಸಂಸ್ಕೃತಿಯ ದೀಪ :ಡಾ.ಆಲೂರ

■ ಉದಯರಶ್ಮಿ ದಿನಪತ್ರಿಕೆ

ಗದಗ: ಲಿಂ.ಶರಣೆ ಸರೋಜಮ್ಮ ಹಾಗೂ ಲಿಂ.ರುದ್ರಪ್ಪ ಶಂಕರಪ್ಪ ಪಟ್ಟಣ ಇವರು ಕೇವಲ ಒಂದು ಕುಟುಂಬದ ಹಿರಿಯರಲ್ಲ; ಸಂಸ್ಕಾರ, ಶರಣ ಸಂಸ್ಕೃತಿ, ಸಮಾಜಮುಖಿ ಚಿಂತನೆ, ಸ್ವಾತಂತ್ರ್ಯ ಹೋರಾಟದ ಆದರ್ಶ ಹಾಗೂ ಬಸವಾದಿ ಶಿವಶರಣರ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ನಡೆದ ಆದ–'ರ್ಶ ಜೀವಿಗಳು. ಅವರ ಜೀವನಮೌಲ್ಯಗಳು ಮತ್ತು ಸಮಾಜಸೇವೆಯ ಹೆಜ್ಜೆಗುರುತುಗಳು ಇಂದಿನ ಪೀಳಿಗೆಗೆ ದಾರಿದೀಪವಾಗಿವೆ ಎಂದು ಕೊಡಗು ವಿಶ್ವವಿದ್ಯಾಲಯ ಕುಲಪತಿ ಡಾ.ಅಶೋಕ ಆಲೂರು ಹೇಳಿದರು.

ಅ.04 ರಂದು ನಗರದ ಹುಡ್ಕೋ ಬಡಾವಣೆಯ ಶ್ರೀ ಸಚ್ಚಿದಾನಂದ ಕಲ್ಯಾಣ ಮಂಟಪದಲ್ಲಿ, ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ, ರಾಮದುರ್ಗ ಹಾಗೂ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ವೇದಿಕೆಯ ಆಶ್ರಯದಲ್ಲಿ ನಡೆದ ಲಿಂ.ಪಟ್ಟಣ ದಂಪತಿಯ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇದೊಂದು ಸಾಮಾನ್ಯ ಸ್ಮರಣೋತ್ಸವ ಕಾರ್ಯಕ್ರಮವಾಗಿರದೆ, ಹಿರಿಯರ ಬದುಕಿನ ಆದ–'ರ್ಶಗಳನ್ನು ವರ್ತಮಾನದ ಬದುಕಿನೊಂದಿಗೆ ಜೋಡಿಸಿದ ಅಪೂರ್ವ ಶರಣ ಸಂಗಮವಾಗಿದೆ ಎಂದು ಡಾ.ಆಲೂರ ಬಣ್ಣಿಸಿದರು. ಕರ್ನಾಟಕ ಸರ್ಕಾರದ ಮುಖ್ಯ ಸಚೇತಕರು ಹಾಗೂ ರಾಮದುರ್ಗ ಶಾಸಕ ಅಶೋಕ ಪಟ್ಟಣ ಅವರು ಉದ್ಘಾಟನಾ ನುಡಿಗಳಲ್ಲಿ, ತಮ್ಮ ಕುಟುಂಬದ ಪರಂಪರೆ, ಮಮತೆ, ಕರ್ತವ್ಯನಿಷ್ಠೆ, ಸಮಾಜಮುಖಿ ಚಿಂತನೆ ಹಾಗೂ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯನ್ನು ಭಾವುಕರಾಗಿ ಮೆಲುಕು ಹಾಕಿದರು.

ಬಸವಾದಿ ಶರಣರ ಅಮೂಲ್ಯ ವಚನ ಸಾಹಿತ್ಯದ ದಿವ್ಯ ಸಾನ್ನಿಧ್ಯದಲ್ಲಿ, ಶಾಂತಲಿಂಗ ಸ್ವಾಮಿಗಳು, ದೊರೆಸ್ವಾಮಿ ಮಠ, ಬೈರನಟ್ಟಿ ಹಾಗೂ ತೋಂಟದಾರ್ಯಮಠ, ಶಿರೋಳ ಇವರ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮವು ಆಧ್ಯಾತ್ಮಿಕತೆ, ಚಿಂತನೆ, ಕೃತಜ್ಞತೆ ಹಾಗೂ ಮಾನವೀಯ ಮೌಲ್ಯಗಳ ಸುಂದರ ಸಂಗಮವಾಗಿತ್ತು.

ಮಗಳು ಆಶಾತಾಯಿ ಅವರು ತಮ್ಮ ಹಿರಿಯರ ವ್ಯಕ್ತಿತ್ವವನ್ನು ಪರಿಚಯಿಸಿದರು. ಪ್ರೊ. ರವೀಂದ್ರ ಪಟ್ಟಣ ಸ್ವಾಗತಿಸಿದರು. ಡಾ.ಶಶಿಕಾಂತ ಪಟ್ಟಣ ಪ್ರಾಸ್ತಾವಿಕ ನುಡಿಗಳನ್ನಾಡಿ, ಧನ್ಯತಾಭಾವ ವ್ಯಕ್ತಪಡಿಸಿದರು.

ಕಪ್ಪತಗುಡ್ಡದ ನಂದೀಶ್ವರ ಸ್ವಾಮಿಗಳು ಮಾತನಾಡಿದರು. ಶರಣ ಶಂಕರ ಕುಪ್ಪಸ್ತ ನಿರೂಪಿಸಿದರು. ಡಾ. ಎಸ್.ಸಿ. ಚವಡಿ, ಮಹಾದೇವಪ್ಪ ಬಟ್ಟೂರ, ಪ್ರೊ. ಶಾರದಮ್ಮ ಪಾಟೀಲ, ಶರಣೆ ಆಶಾಲತಾ ಸೊಗಲದ, ಡಾ. ಶಿಲ್ಪಾ ಪವಾಡಶೆಟ್ಟರ ಹಾಗೂ ಶಾಸನತಜ್ಞೆ, ಹಿರಿಯ ಸಂಶೋಧಕಿ ಪ್ರೊ. ಹನುಮಾಕ್ಷಿ ಗೋಗಿ ವೇದಿಕೆ ಮೇಲಿದ್ದರು. ಲಿಂಗೈಕ್ಯರಾದ ರುದ್ರಪ್ಪನವರು ಮತ್ತು ಸರೋಜಮ್ಮ ಪಟ್ಟಣ ದಂಪತಿಗಳ ಸ್ಮರಣೋತ್ಸವವನ್ನು ಅವರ ಮಕ್ಕಳಾದ ಡಾ. ಶಶಿಕಾಂತ ಪಟ್ಟಣ ಮತ್ತು ಪ್ರೊ. ರವೀಂದ್ರ ಪಟ್ಟಣ ಅವರು ಆಚರಿಸಿದ ರೀತಿ ನಿಜಕ್ಕೂ ಮಾದರಿಯಾಯಿತು.



### ಬಸವ ಸಂಕಲ್ಪದ ಸಾಕ್ಷಿಯಾದ ಗದಗ ಜಿಲ್ಲಾ ಘಟಕದ ಉದ್ಘಾಟನೆ

ಸ್ಮರಣೋತ್ಸವದ ಸಂದರ್ಭದಲ್ಲಿ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ, ಪುಣೆಯ ಗದಗ ಜಿಲ್ಲಾ ಘಟಕದ ಉದ್ಘಾಟನೆಯೂ ನೆರವೇರಿತು.

ಡಾ. ಅಶೋಕ ಆಲೂರ ಅವರು ನೂತನ ಜಿಲ್ಲಾ ಘಟಕದ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದರು.

### ಡಾ. ಫ.ಗು. ಹಳಕಟ್ಟಿಯವರಿಗೆ ಗೌರವ ನಮನ

ಇದೇ ಸಂದರ್ಭದಲ್ಲಿ ವಚನ ಸಾಹಿತ್ಯದ ಮಹಾನ್ ಸೇವಕರಾದ ಡಾ. ಫ.ಗು. ಹಳಕಟ್ಟಿ ಅವರ ಮೊಮ್ಮಗಳಾದ ಶರಣೆ ಸುಜಾತಾ ಹಳಕಟ್ಟಿ ಅವರನ್ನು ಸತ್ಕರಿಸುವ ಮೂಲಕ ಹಳಕಟ್ಟಿ ಕುಟುಂಬಕ್ಕೆ ಗೌರವ ಸಮರ್ಪಿಸಲಾಯಿತು.



### 'ಬಸವ ಗುರು' ಪ್ರಶಸ್ತಿ ಪ್ರದಾನ

ಇದೇ ಸಂದರ್ಭದಲ್ಲಿ ಡಾ. ಅಶೋಕ ಆಲೂರು, ಡಾ. ವೀಣಾ ಯಲಿಗಾರ, ಡಾ. ದಾನಮ್ಮ ಝಳಕಿ, ಅಪ್ಪಾಸಾಹೇಬ ತುಪ್ಪದ, ಡಾ. ಶಾರದಾಮಣಿ ಹುನಶಾಳ, ಜಿ.ಎಂ. ಹಡಗಿನಾಳ ಹಾಗೂ ಶರಣೆ ಅನ್ನಪೂರ್ಣ ಎಸ್. ಕೊಟಗಿ ಅವರಿಗೆ "ಬಸವ ಗುರು" ಪ್ರಶಸ್ತಿಯನ್ನು ಪ್ರದಾನ ಮಾಡಿ ಗೌರವಿಸಲಾಯಿತು.

ಪ್ರಶಸ್ತಿ ಪುರಸ್ಕೃತರ ಪರವಾಗಿ ಡಾ. ವೀಣಾ ಯಲಿಗಾರ ಮಾತನಾಡಿದರು.

# ಧರ್ಮಕ್ಷೇತ್ರ ಕುರುಕ್ಷೇತ್ರ ಆಗಬಾರದು!




ಪ್ರಶಾಂತ ಕುಲಕರ್ಣಿ.
ಉಪನ್ಯಾಸಕರು
ಸಿಂದಗಿ – ವಿಜಯಪುರ

**ನಮ್ಮ ಸುತ್ತಲೂ ಅನೇಕ ಜನ ಇರುತ್ತಾರೆ. ಆದರೆ ಕಣ್ಣಲ್ಲಿ ನೀರು ತುಂಬಿದಾಗ ನಮ್ಮ ಕಣ್ಣೀರನ್ನು ಗಮನಿಸುವ ಒಬ್ಬ ವ್ಯಕ್ತಿ, ನಾವು ಸೋತಾಗ “ನಾನು ಇದ್ದೇನೆ” ಎಂದು ಕೈ ಹಿಡಿಯುವ ಒಬ್ಬ ವ್ಯಕ್ತಿ, ನಾವು ತಪ್ಪಿದಾಗ ದ್ವೇಷದಿಂದ ದೂರ ಹೋಗದೆ ಪ್ರೀತಿಯಿಂದ ಸರಿದಾರಿಗೆ ತರುವ ಒಬ್ಬ ವ್ಯಕ್ತಿ ಇವರೇ ಬದುಕಿನ ನಿಜವಾದ ಸಂಪತ್ತು.**

■ ಉದಯರಶ್ಮಿ ದಿನಪತ್ರಿಕೆ

ಮನುಷ್ಯನ ಬದುಕಿನಲ್ಲಿ ನಡೆಯುವ ಬಹುತೇಕ ಯುದ್ಧಗಳು ಹೊರಗೆ ಆರಂಭವಾಗುವುದಿಲ್ಲ; ಅವು ಮೊದಲು ಮನಸ್ಸಿನಲ್ಲಿ ಆರಂಭವಾಗುತ್ತವೆ. ಒಂದು ಸಣ್ಣ ಅನುಮಾನ, ಒಂದು ತಪ್ಪು ಅರ್ಥೈಸಿಕೊಳ್ಳುವಿಕೆ, ಒಂದು ಕಠಿಣ ಮಾತು, ಒಂದು ಅಹಂಕಾರ ಇವು ನಿಧಾನವಾಗಿ ಮನಸ್ಸಿನೊಳಗೆ ಗೋಡೆಗಳನ್ನು ಕಟ್ಟುತ್ತವೆ. ಗೋಡೆಗಳು ಎತ್ತರವಾಗುತ್ತಾ ಹೋದಂತೆ ಹತ್ತಿರದವರು ದೂರವಾಗುತ್ತಾರೆ. ಪ್ರೀತಿ ಕಡಿಮೆಯಾದ ಜಾಗದಲ್ಲಿ ದ್ವೇಷ ಬೆಳೆಯುತ್ತದೆ. ನಂಬಿಕೆ ಕಳೆದುಹೋದ ಜಾಗದಲ್ಲಿ ಅನುಮಾನ ಹುಟ್ಟುತ್ತದೆ. ಕೊನೆಗೆ ಧರ್ಮಕ್ಷೇತ್ರವೇ ಕುರುಕ್ಷೇತ್ರವಾಗುತ್ತದೆ.

ನಮ್ಮ ಇತಿಹಾಸದಲ್ಲಿ ಇದಕ್ಕೆ ಎಷ್ಟೋ ಪಾಠಗಳಿವೆ. ನಳಂದ ವಿಶ್ವವಿದ್ಯಾಲಯವನ್ನು ನೆನಪಿಸಿಕೊಂಡರೆ ಭಾರತದ ಜ್ಞಾನ ಪರಂಪರೆಯ



ವೈಭವ ಕಣ್ಣ ಮುಂದೆ ಬರುತ್ತದೆ. ಸಾವಿರಾರು ವಿದ್ಯಾರ್ಥಿಗಳು, ಪರಿಣಿತ ಅಧ್ಯಾಪಕರು, ದೂರದ ಪರ್ಷಿಯಾ, ಚೀನಾ, ಬರ್ಮಾದಿಂದಲೂ ಜ್ಞಾನ ಅರಸಿಕೊಂಡು ಬರುತ್ತಿದ್ದ ವಿದ್ಯಾರ್ಥಿಗಳು, ಅಪಾರ ಗ್ರಂಥಸಂಪತ್ತು ನಳಂದ ಕೇವಲ ವಿಶ್ವವಿದ್ಯಾಲಯವಾಗಿರಲಿಲ್ಲ; ಅದು ಜ್ಞಾನದ ಮಹಾಕೇಂದ್ರವಾಗಿತ್ತು. ಆ ಜ್ಞಾನ ಭಂಡಾರಕ್ಕೆ ಬೆಂಕಿ ತಗುಲಿದಾಗ ಕೇವಲ ಕಟ್ಟಡವೊಂದು ಸುಡಲಿಲ್ಲ; ಭಾರತದ ಜ್ಞಾನಸಂಪತ್ತಿನ ಒಂದು ದೊಡ್ಡ ಅಧ್ಯಾಯವೇ ಭಸ್ಮವಾಯಿತು. ಪುಸ್ತಕಗಳ ಪುಟಗಳನ್ನು ಬೆಂಕಿ ಸುಟ್ಟಿರಬಹುದು; ಆದರೆ ಅಂತಹ ವಿನಾಶದ ಹಿಂದೆ ಹೊತ್ತಿಕೊಂಡಿದ್ದದ್ದು ಮನುಷ್ಯನೊಳಗಿನ ದ್ವೇಷದ ಬೆಂಕಿ. ಹೊರಗಿನ ಬೆಂಕಿ ಒಂದು ಕಟ್ಟಡವನ್ನು ಸುಡುತ್ತದೆ; ಒಳಗಿನ ದ್ವೇಷದ ಬೆಂಕಿ ಸಂಬಂಧಗಳನ್ನು ಸುಡುತ್ತದೆ. ಜ್ಞಾನವನ್ನು ನಾಶಮಾಡುವ ಬೆಂಕಿಗಿಂತ ಮನುಷ್ಯನೊಳಗಿನ ದ್ವೇಷದ ಬೆಂಕಿಯೇ ಹೆಚ್ಚು ಭಯಾನಕ.

ಮಹಾಭಾರತದ ಕಥೆಯಲ್ಲಿಯೂ ಇದೇ ಸತ್ಯ ಕಾಣುತ್ತದೆ. ಧೃತರಾಷ್ಟ್ರನಿಗೆ ನೂರು ಮಕ್ಕಳು. ಪಾಂಡವರೂ ಅವನ



ಕುಟುಂಬದವರೇ. ಒಂದೇ ವಂಶ, ಒಂದೇ ರಕ್ತದ ಸಂಬಂಧ. ಎಲ್ಲರೂ ನಮ್ಮವರೇ ಎಂಬ ಭಾವನೆ ಉಳಿದಿದ್ದರೆ ಧರ್ಮಕ್ಷೇತ್ರ ಧರ್ಮಕ್ಷೇತ್ರವಾಗಿಯೇ ಉಳಿಯುತ್ತಿತ್ತು. ಆದರೆ “ಇವರು ಬೇರೆ, ಅವರು ಬೇರೆ” ಎಂಬ ಭಾವನೆ ನಿಧಾನವಾಗಿ ಸಂಬಂಧಗಳ ನಡುವೆ ಗೋಡೆ ಕಟ್ಟಿತು. ಸ್ವಾರ್ಥ, ಅಹಂಕಾರ, ಅಧಿಕಾರದ ಆಸೆ ಮತ್ತು ದ್ವೇಷ ಆ ಗೋಡೆಯನ್ನು ಮತ್ತಷ್ಟು ಗಟ್ಟಿಗೊಳಿಸಿದವು. ಕೊನೆಗೆ ಬಂಧುಗಳೇ ಪರಸ್ಪರ ಎದುರಾಗಿ ನಿಂತರು. ಧರ್ಮಕ್ಷೇತ್ರ ಕುರುಕ್ಷೇತ್ರವಾಯಿತು.

ಮಹಾಭಾರತದ ಈ ಕಥೆ ಹಳೆಯದಾದರೂ ಅದರ ಪಾಠ ಮಾತ್ರ ಪ್ರತಿದಿನ ಹೊಸದಾಗುತ್ತಿದೆ. ಇಂದು ನಮ್ಮ ಮನೆಗಳಲ್ಲಿಯೂ ಸಣ್ಣಸಣ್ಣ ಕಾರಣಗಳಿಗೆ ಸಂಬಂಧಗಳು ಬಿರುಕು ಬಿಡುತ್ತಿವೆ. ಆಸ್ತಿ, ಹಣ, ಅಧಿಕಾರ, ಪ್ರತಿಷ್ಠೆ, ಮಾತಿನ ತಪ್ಪು, ಸಣ್ಣ ಮನಸ್ತಾಪ ಯಾವುದೋ ಒಂದು ಕಾರಣದಿಂದ ವರ್ಷಗಳ ಸಂಬಂಧಗಳು ದೂರವಾಗುತ್ತಿವೆ. ಒಂದೇ ತಾಯಿಯ ಮಕ್ಕಳು ಅಪರಿಚಿತರಾಗುತ್ತಾರೆ. ಒಂದೇ ಮನೆಯಲ್ಲಿ ವಾಸಿಸುವ ಗಂಡ–ಹೆಂಡತಿ ಮನಸ್ಸಿನಲ್ಲಿ ಬೇರೆಬೇರೆ ಬದುಕು ಆರಂಭಿಸುತ್ತಾರೆ. ತಂದೆ–ತಾಯಿಯ ಪ್ರೀತಿ ಮಕ್ಕಳಿಗೆ ಹಳೆಯದಾಗಿ ಕಾಣುತ್ತದೆ; ಮಕ್ಕಳ ಪ್ರೀತಿ ತಂದೆ–ತಾಯಿಗೆ ಸಮಯದ ಕೊರತೆಯಾಗಿ ಕಾಣುತ್ತದೆ. ಹೀಗೆ ಮನೆ ಉಳಿದರೂ ಮನೆಯೊಳಗಿನ ಆತ್ಮೀಯತೆ ನಿಧಾನವಾಗಿ ಕಡಿಮೆಯಾಗುತ್ತದೆ.

ಸಂಸಾರವೆಂದ ಮೇಲೆ ಭಿನ್ನಾಭಿಪ್ರಾಯಗಳು ಬರಲೇಬೇಕು. ಇಬ್ಬರು ಮನುಷ್ಯರು ಎಂದ ಮೇಲೆ ಅವರ ಆಲೋಚನೆಗಳು ಒಂದೇ ಆಗುವುದಿಲ್ಲ. ಕೆಲವೊಮ್ಮೆ ಮಾತುಗಳು ಭಿನ್ನವಾಗುತ್ತವೆ, ಅಭಿಪ್ರಾಯಗಳು ಬೇರೆಯಾಗುತ್ತವೆ, ದಾರಿಗಳೂ ಬೇರೆ ಆಗಬಹುದು. ಆದರೆ ಮನಸ್ಸುಗಳಲ್ಲಿ ಪ್ರೀತಿ ಉಳಿದಿದ್ದರೆ ಸಂಬಂಧ ಮುರಿಯುವುದಿಲ್ಲ. ಮನೆ ಬೇರೆ ಆಗಬಹುದು; ಮನಸ್ಸು ಬೇರೆ ಆಗಬಾರದು. ಮಾತು ಕಡಿಮೆಯಾಗಬಹುದು; ಮಮತೆ ಕಡಿಮೆಯಾಗಬಾರದು. ದೂರವಿರಬೇಕಾದ ಸಂದರ್ಭ ಬರಬಹುದು; ದ್ವೇಷ ಬೆಳೆಸಿಕೊಳ್ಳುವ ಅಗತ್ಯವಿಲ್ಲ.

ಒಂದು ಕಸಬರಗಿಯನ್ನು ನೋಡಿದರೆ ಅದರಲ್ಲಿರುವ ಪ್ರತಿಯೊಂದು ಕಡ್ಡಿಯೂ ಚಿಕ್ಕದಾಗಿರುತ್ತದೆ. ಒಂದೊಂದು ಕಡ್ಡಿಗೆ ದೊಡ್ಡ ಶಕ್ತಿಯೇನೂ ಇರುವುದಿಲ್ಲ. ಆದರೆ ಅವೆಲ್ಲವೂ ಒಟ್ಟಾಗಿ ಸೇರಿದಾಗ ಕಸವನ್ನು ಗುಡಿಸುವ ಶಕ್ತಿಯಾಗುತ್ತವೆ. ಒಂದು ಕಡ್ಡಿ ಕೆಳಗೆ ಬಿದ್ದರೆ ಅದು ಕಸವಾಗುತ್ತದೆ. ಕುಟುಂಬವೂ ಹಾಗೆಯೇ. ಒಟ್ಟಾಗಿ ನಿಂತಾಗ ಕುಟುಂಬ ಶಕ್ತಿ; ಒಬ್ಬರನ್ನೊಬ್ಬರು ಹಿಡಿದು ನಿಲ್ಲಿಸಿದಾಗ ಕುಟುಂಬ ಆಶ್ರಯ. ಸಂಬಂಧಗಳು ಒಟ್ಟಾಗಿ ಉಳಿದಾಗಲೇ ಮನೆಗೆ ಮನೆಯ ಸೌಂದರ್ಯ ಬರುತ್ತದೆ.

ಇಂದು ನಾವು ಮನೆ ಕಟ್ಟಲು ಬಹಳ ಹಣ ಖರ್ಚು ಮಾಡುತ್ತೇವೆ. ದೊಡ್ಡ ಕೋಣೆಗಳು, ವಿಶಾಲ ಅಡುಗೆಮನೆ, ಓಪನ್ ಕಿಚನ್, ಸುಂದರ ಪೀಠೋಪಕರಣಗಳು, ವಿದೇಶಿ ಅಲಂಕಾರಿಕ ವಸ್ತುಗಳು ಎಲ್ಲವನ್ನೂ ತುಂಬಿಸುತ್ತೇವೆ. ಮನೆ ಸುಂದರವಾಗುತ್ತದೆ. ಆದರೆ ಮನುಷ್ಯರ ಮನಸ್ಸುಗಳಲ್ಲಿ ಪ್ರೀತಿ ಇಲ್ಲದಿದ್ದರೆ ಆ ಸೌಂದರ್ಯ ಅಪೂರ್ಣ. ದೊಡ್ಡ ಮನೆ ಇದ್ದರೂ ಒಬ್ಬರೊಂದಿಗೆ ಮತ್ತೊಬ್ಬರು ಮಾತನಾಡದಿದ್ದರೆ ಅದು ಕೇವಲ ಕಟ್ಟಡ. ಊಟದ ಮೇಜು ದೊಡ್ಡದಿದ್ದರೂ ಅದರ ಸುತ್ತ ಕುಟುಂಬದವರು ಕೂತು ನಗದಿದ್ದರೆ ಆ ಮೇಜಿನ ಸೌಂದರ್ಯವೇನು? ಮನೆಯ ಗೋಡೆಗಳು ದುಬಾರಿಯಾಗಿರಬಹುದು; ಆದರೆ ಮನೆಯೊಳಗಿನ ನಗು ಉಚಿತವಾಗಿರುತ್ತದೆ. ಆ ನಗುವೇ ಮನೆಯ ನಿಜವಾದ ಅಲಂಕಾರ.

ಇಂದಿನ ಬದುಕಿನ ಮತ್ತೊಂದು ವಿಚಿತ್ರತೆ ಎಂದರೆ, ಮನೆಗಳು ತಂತ್ರಜ್ಞಾನದಿಂದ ಸಂಪರ್ಕಗೊಂಡಿವೆ; ಆದರೆ ಮನಸ್ಸುಗಳು ದೂರವಾಗುತ್ತಿವೆ. ಒಂದೇ ಮನೆಯಲ್ಲಿ ಕುಳಿತಿರುವ ನಾಲ್ಕು ಜನರು ನಾಲ್ಕು ಮೊಬೈಲ್‌ಗಳಲ್ಲಿ ನಾಲ್ಕು ಲೋಕಗಳಲ್ಲಿ ಬದುಕುತ್ತಿದ್ದಾರೆ. ಮಾತುಕತೆಗೆ ಸಮಯ ಕಡಿಮೆಯಾಗುತ್ತಿದೆ. ಒಬ್ಬರ ಮುಖವನ್ನು ನೋಡುವುದಕ್ಕಿಂತ ಪರದೆಯನ್ನು ನೋಡುವ ಸಮಯ ಹೆಚ್ಚಾಗಿದೆ. ಆದರೆ ಮನುಷ್ಯನಿಗೆ ಬೇಕಾಗಿರುವುದು ಕೇವಲ ಸಂಪರ್ಕವಲ್ಲ; ಆತ್ಮೀಯತೆ. ಫು–ಈು ಮನಸ್ಸುಗಳನ್ನು ಜೋಡಿಸುವುದಿಲ್ಲ. ಒಂದು ಪ್ರೀತಿಯ ಮಾತು ಮಾತ್ರ ಕೆಲವೊಮ್ಮೆ ವರ್ಷಗಳ ದೂರವನ್ನು ಕಡಿಮೆ ಮಾಡುತ್ತದೆ.

ನಾವು ಆಕಾಶದಲ್ಲಿರುವ ಗ್ರಹಗಳನ್ನು ನಂಬುತ್ತೇವೆ. ಆದರೆ ನಮ್ಮ ಪಕ್ಕದಲ್ಲಿರುವ ಮನುಷ್ಯನ ಮೇಲೆ ನಂಬಿಕೆ ಇಡುವುದನ್ನು ಕೆಲವೊಮ್ಮೆ ಮರೆತುಬಿಡುತ್ತೇವೆ. ಸಂಬಂಧಗಳ ನೆಲೆ ನಂಬಿಕೆ. ನಂಬಿಕೆ ಇರುವಲ್ಲಿ ಕ್ಷಮೆ ಇರುತ್ತದೆ. ಕ್ಷಮೆ ಇರುವಲ್ಲಿ ಪ್ರೀತಿ ಉಳಿಯುತ್ತದೆ. ಪ್ರೀತಿ ಉಳಿದಲ್ಲಿ ಮನೆಯೊಳಗೆ ಎಷ್ಟೇ ಸಣ್ಣ ಜಗಳ ಬಂದರೂ ಅದು ಯುದ್ಧವಾಗುವುದಿಲ್ಲ; ಎಷ್ಟೇ ದೊಡ್ಡ ಸಮಸ್ಯೆ ಬಂದರೂ ಅದು ಕುಟುಂಬವನ್ನು ಸಂಪೂರ್ಣವಾಗಿ ಒಡೆಯುವುದಿಲ್ಲ.

ರಾಮಾಯಣವೂ ನಮಗೆ ಇದೇ ಪಾಠವನ್ನು ಹೇಳುತ್ತದೆ. ರಾವಣನಿಗೆ ಅಪಾರ ಶಕ್ತಿ ಇತ್ತು. ಜ್ಞಾನವಿತ್ತು. ಸಾಮ್ರಾಜ್ಯವಿತ್ತು. ಸಂಪತ್ತು ಇತ್ತು. ಆದರೆ ಸಂಕಷ್ಟದ ಸಮಯದಲ್ಲಿ ಅವನ ತಮ್ಮ ವಿಭೀಷಣ ಅವನಿಂದ ದೂರವಾದ. ರಾಮನ ಬಳಿ ಲಂಕೆಯಂತಹ ಸಾಮ್ರಾಜ್ಯ ಇರಲಿಲ್ಲ; ಆದರೆ ಕಷ್ಟದ ಸಮಯದಲ್ಲಿ ಲಕ್ಷ್ಮಣ ಅವನ ಜೊತೆಯಲ್ಲಿದ್ದ. ಹನುಮಂತನಂತಹ ನಿಷ್ಠಾವಂತ ಸಹಾಯಕನಿದ್ದ. ಸುಗ್ರೀವನಂತಹ ಸ್ನೇಹಿತನಿದ್ದ. ಬದುಕಿನಲ್ಲಿ ನಮ್ಮ ಸುತ್ತಲಿರುವ ಜನರ ಸಂಖ್ಯೆ ಮುಖ್ಯವಲ್ಲ; ಕಷ್ಟ ಬಂದಾಗ ನಮ್ಮ ಪಕ್ಕದಲ್ಲಿ ನಿಲ್ಲುವ ಹೃದಯಗಳೇ ಮುಖ್ಯ.

ಸುಖದಲ್ಲಿರುವಾಗ ನಮ್ಮ ಸುತ್ತಲೂ ಅನೇಕ ಜನ ಇರುತ್ತಾರೆ. ಆದರೆ ಕಣ್ಣಲ್ಲಿ ನೀರು ತುಂಬಿದಾಗ ನಮ್ಮ ಕಣ್ಣೀರನ್ನು ಗಮನಿಸುವ ಒಬ್ಬ ವ್ಯಕ್ತಿ, ನಾವು ಸೋತಾಗ “ನಾನು ಇದ್ದೇನೆ” ಎಂದು ಕೈ ಹಿಡಿಯುವ ಒಬ್ಬ ವ್ಯಕ್ತಿ, ನಾವು ತಪ್ಪಿದಾಗ ದ್ವೇಷದಿಂದ ದೂರ ಹೋಗದೆ ಪ್ರೀತಿಯಿಂದ ಸರಿದಾರಿಗೆ ತರುವ ಒಬ್ಬ ವ್ಯಕ್ತಿ ಇವರೇ ಬದುಕಿನ ನಿಜವಾದ ಸಂಪತ್ತು. ಅಂತಹ ಸಂಬಂಧಗಳಿರುವ ಮನೆ ಚಿಕ್ಕದಾಗಿದ್ದರೂ ದೊಡ್ಡದಾಗಿರುತ್ತದೆ.

ಇದೇ ಮಾತು ದೇವರ ಭಕ್ತಿಗೂ ಅನ್ವಯಿಸುತ್ತದೆ. ನಾವು ದೇವರಿಗೆ ಅಭಿಷೇಕ ಮಾಡುತ್ತೇವೆ, ತುಪ್ಪದ ದೀಪ ಹಚ್ಚುತ್ತೇವೆ, ಹೂವು ಅರ್ಪಿಸುತ್ತೇವೆ, ನೈವೇದ್ಯ ಇಡುತ್ತೇವೆ. ಇವೆಲ್ಲವೂ ನಮ್ಮ ಭಕ್ತಿಯ ಅಭಿವ್ಯಕ್ತಿಗಳು. ಆದರೆ ದೇವರಿಗೆ ಇಷ್ಟವಾಗುವುದು ಕೇವಲ ಹೊರಗಿನ ಆಚರಣೆಗಳಲ್ಲ; ಒಳಗಿನ ಭಾವನೆ. ಸಪ್ತಸಾಗರಗಳನ್ನು ಸೃಷ್ಟಿಸಿದವನಿಗೆ ನಾವು ಸುರಿಸುವ ಕೆಲವು ಕೊಡ ನೀರಿನ ಕೊರತೆಯೇನು? ಸೂರ್ಯ–ಚಂದ್ರರನ್ನೇ ಸೃಷ್ಟಿಸಿದವನಿಗೆ ನಮ್ಮ ತುಪ್ಪದ ದೀಪದ ಬೆಳಕಿನ ಅಗತ್ಯವೇನು? ಸಕಲ ಜೀವರಾಶಿಗಳಿಗೆ ಅನ್ನ ನೀಡುತ್ತಿರುವವನಿಗೆ ನಾವು ಇಡುವ ನೈವೇದ್ಯದ ಕೊರತೆಯೇನು?

ದೇವರಿಗೆ ನಾವು ಕೊಡುವ ದೊಡ್ಡ ನೈವೇದ್ಯವೆಂದರೆ ಪ್ರೀತಿಯ ಹೃದಯ. ದೇವರಿಗೆ ಅರ್ಪಿಸುವ ದೊಡ್ಡ ಹೂವೆಂದರೆ ಕರುಣೆ. ಹಚ್ಚುವ ದೊಡ್ಡ ದೀಪವೆಂದರೆ ಇನ್ನೊಬ್ಬರ ಬದುಕಿನಲ್ಲಿ ಬೆಳಕು ಮೂಡಿಸುವ ಒಳ್ಳೆಯತನ. ದೇವಾಲಯದಲ್ಲಿ ತಲೆಬಾಗುವುದರ ಜೊತೆಗೆ ಮನೆಯಲ್ಲಿ ಹಿರಿಯರ ಮುಂದೆ ಗೌರವದಿಂದ ತಲೆಬಾಗುವುದು, ದೇವರಿಗೆ ಹೂ ಅರ್ಪಿಸುವುದರ ಜೊತೆಗೆ ಒಬ್ಬರ ಮನಸ್ಸಿಗೆ ಸಂತೋಷ ನೀಡುವುದು, ದೇವರಿಗೆ ನೈವೇದ್ಯ ಇಡುವುದರ ಜೊತೆಗೆ ಹಸಿದವನಿಗೆ ಅನ್ನ ನೀಡುವುದು ಇವೆಲ್ಲವೂ ಭಕ್ತಿಯ ಬದುಕಿನ ರೂಪಗಳೇ.

ಯಾರ ಹೃದಯದಲ್ಲಿ ಪ್ರೀತಿ ಇದೆಯೋ, ಕರುಣೆ ಇದೆಯೋ, ಕ್ಷಮೆ ಇದೆಯೋ, ಮಾನವೀಯತೆ ಇದೆಯೋ ಅಲ್ಲಿಯೇ ದೇವರ ವಾಸ. ಆದ್ದರಿಂದ



ಮನೆ ದೊಡ್ಡದಾಗಬೇಕಿಲ್ಲ; ಹೃದಯ ದೊಡ್ಡದಾಗಬೇಕು. ಮನೆಯಲ್ಲಿ ವಸ್ತುಗಳು ಹೆಚ್ಚಾಗಬೇಕಿಲ್ಲ; ಆತ್ಮೀಯತೆ ಹೆಚ್ಚಾಗಬೇಕು. ಗೋಡೆಗಳು ಎತ್ತರವಾಗಬೇಕಿಲ್ಲ; ಸಂಬಂಧಗಳು ಗಟ್ಟಿಯಾಗಬೇಕು. ಸಂಪತ್ತು ಹೆಚ್ಚಾಗಬೇಕಿಲ್ಲ; ಸಂತೋಷ ಹಂಚಿಕೊಳ್ಳುವ ಮನಸ್ಸು ಹೆಚ್ಚಾಗಬೇಕು.

ಒಂದು ದಿನ ನಾವು ಕಟ್ಟಿದ ಮನೆ ಉಳಿಯಬಹುದು, ಆದರೆ ನಾವು ಅದರೊಳಗೆ ಇರುವುದಿಲ್ಲ. ನಾವು ಸಂಗ್ರಹಿಸಿದ ವಸ್ತುಗಳು ಉಳಿಯಬಹುದು, ಆದರೆ ಅವುಗಳನ್ನು ಅನುಭವಿಸಲು ನಾವು ಇರುವುದಿಲ್ಲ. ನಮ್ಮ ಹೆಸರಿನ ಫಲಕ ಉಳಿಯಬಹುದು, ಆದರೆ ನಮ್ಮ ಧ್ವನಿ ಇರುವುದಿಲ್ಲ. ಉಳಿಯುವುದು ನಾವು ಯಾರ ಹೃದಯದಲ್ಲಿ ಪ್ರೀತಿಯಾಗಿ ಬದುಕಿದ್ದೇವೆ ಎಂಬ ನೆನಪು ಮಾತ್ರ. ಆದ್ದರಿಂದ ಬದುಕಿರುವಾಗಲೇ ಸಂಬಂಧಗಳನ್ನು ಕಾಪಾಡಿಕೊಳ್ಳಬೇಕು. ಮಾತು ತಪ್ಪಿದರೆ ಕ್ಷಮೆ ಕೇಳಬೇಕು. ಮನಸ್ಸು ನೋಯಿಸಿದರೆ ಸಮಾಧಾನಪಡಿಸಬೇಕು. ದೂರವಾದವರನ್ನು ಸಾಧ್ಯವಾದಷ್ಟು ಹತ್ತಿರಕ್ಕೆ ತರಬೇಕು. ಏಕೆಂದರೆ ಕೆಲವೊಂದು ಸಂಬಂಧಗಳು ಕಳೆದುಹೋದ ಮೇಲೆ ಮರಳಿ ಸಿಗುವುದಿಲ್ಲ.

ಬದುಕು ಬಹಳ ಚಿಕ್ಕದು. ನಿನ್ನೆ ನಮ್ಮ ಜೊತೆ ಇದ್ದ ಕೆಲವರು ಇಂದು ನಮ್ಮ ಜೊತೆ ಇಲ್ಲ. ನಾಳೆ ನಾವು ಯಾರ ಜೊತೆ



ಇರುತ್ತೇವೆ ಎಂಬುದೂ ನಮಗೆ ಗೊತ್ತಿಲ್ಲ. ಹಾಗಿರುವಾಗ ಸಣ್ಣಸಣ್ಣ ವಿಷಯಗಳನ್ನು ದೊಡ್ಡದಾಗಿಸಿಕೊಂಡು ಸಂಬಂಧಗಳನ್ನು ಕಳೆದುಕೊಳ್ಳುವುದರಲ್ಲಿ ಅರ್ಥವೇನು? ಗೆದ್ದರೂ ಯಾರನ್ನಾದರೂ ಕಳೆದುಕೊಳ್ಳಬೇಕಾದ ಗೆಲುವಿಗಿಂತ, ಸ್ವಲ್ಪ ಬಿಟ್ಟುಕೊಟ್ಟು ಎಲ್ಲರನ್ನೂ ಉಳಿಸಿಕೊಳ್ಳುವ ಬದುಕು ಎಷ್ಟೋ ಸುಂದರ.

ಆದ್ದರಿಂದ ನಮ್ಮ ಮನೆಗಳಲ್ಲಿ ಒಂದು ಸಣ್ಣ ಬದಲಾವಣೆ ಸಾಕು “ನಾನು” ಎನ್ನುವ ಪದ ಸ್ವಲ್ಪ ಕಡಿಮೆಯಾಗಲಿ; “ನಾವು” ಎನ್ನುವ ಪದ ಸ್ವಲ್ಪ ಹೆಚ್ಚಾಗಲಿ. “ನನ್ನದು” ಎನ್ನುವುದಕ್ಕಿಂತ “ನಮ್ಮದು” ಎನ್ನುವ ಭಾವನೆ ಬೆಳೆಯಲಿ. ಅಹಂಕಾರ ಸ್ವಲ್ಪ ಹಿಂದೆ ಸರಿಯಲಿ; ಪ್ರೀತಿ ಸ್ವಲ್ಪ ಮುಂದೆ ಬರಲಿ. ಆಗ ಮನೆಯ ಗೋಡೆಗಳಿಗೂ ಒಂದು ಉಷ್ಣತೆ ಬರುತ್ತದೆ. ಮಾತುಗಳಿಗೂ ಒಂದು ಸಿಹಿ ಬರುತ್ತದೆ. ಊಟಕ್ಕೂ ಒಂದು ರುಚಿ ಬರುತ್ತದೆ. ಬದುಕಿಗೂ ಒಂದು ಅರ್ಥ ಬರುತ್ತದೆ.

ಕೊನೆಗೆ ಮನೆ ಎಂದರೆ ನಾಲ್ಕು ಗೋಡೆಗಳಲ್ಲ. ಮನೆ ಎಂದರೆ ನಮ್ಮ ಬರುವಿಕೆಯನ್ನು ಕಾಯುವ ಕಣ್ಣುಗಳು, ನಮ್ಮ ನೋವನ್ನು ಅರ್ಥಮಾಡಿಕೊಳ್ಳುವ ಹೃದಯಗಳು, ನಮ್ಮ ತಪ್ಪನ್ನು ಕ್ಷಮಿಸುವ ಮನಸ್ಸುಗಳು, ನಮ್ಮ ಸಂತೋಷದಲ್ಲಿ ನಗುವವರು, ನಮ್ಮ ಕಷ್ಟದಲ್ಲಿ ಕೈ ಹಿಡಿಯುವವರು. ಅಂತಹ ಮನೆಯಲ್ಲಿ ಬಡತನವಿದ್ದರೂ ನೆಮ್ಮದಿ ಇರುತ್ತದೆ. ಚಿಕ್ಕ ಕೋಣೆಯಿದ್ದರೂ ವಿಶಾಲವಾದ ಪ್ರೀತಿ ಇರುತ್ತದೆ. ಕಡಿಮೆ ವಸ್ತುಗಳಿದ್ದರೂ ತುಂಬಿದ ಬದುಕಿರುತ್ತದೆ.

ಮನೆ ಧರ್ಮಕ್ಷೇತ್ರವಾಗಿರಲಿ; ಕುರುಕ್ಷೇತ್ರವಾಗಬಾರದು. ಮನಸ್ಸುಗಳಲ್ಲಿ ಪ್ರೀತಿ ಇರಲಿ; ದ್ವೇಷಕ್ಕೆ ಜಾಗವಿರಬಾರದು. ಸಂಬಂಧಗಳಲ್ಲಿ ನಂಬಿಕೆ ಇರಲಿ; ಅನುಮಾನಕ್ಕೆ ನೆಲೆ ಸಿಗಬಾರದು. ಯಾಕೆಂದರೆ ಕೊನೆಗೆ ನಮ್ಮ ಬದುಕಿನ ದೊಡ್ಡ ಸಂಪತ್ತು ನಾವು ಕಟ್ಟಿದ ಮನೆ ಅಲ್ಲ ನಾವು ಕಾಪಾಡಿದ ಸಂಬಂಧಗಳು. ನಾವು ಗಳಿಸಿದ ಹಣವಲ್ಲ ನಾವು ಹಂಚಿದ ಪ್ರೀತಿ. ನಾವು ಪಡೆದ ಗೌರವವಲ್ಲ ನಮ್ಮನ್ನು ನೆನೆದು ಯಾರಾದರೂ ಕಣ್ಣಲ್ಲಿ ಮೂಡುವ ಒಂದು ಹನಿ ಕಣ್ಣೀರು. ಧರ್ಮಕ್ಷೇತ್ರವನ್ನು ಕುರುಕ್ಷೇತ್ರವಾಗದಂತೆ ಕಾಪಾಡುವ ಶಕ್ತಿ ನಮ್ಮ ಕೈಯಲ್ಲೇ ಇದೆ ಅದು ಪ್ರೀತಿ.

---



## ಥ್ರೋಬಾಲ್ ಸ್ಪರ್ಧೆಯಲ್ಲಿ ತಾಲೂಕಿಗೆ ಪ್ರಥಮ

■ ಉದಯರಶ್ಮಿ ದಿನಪತ್ರಿಕೆ

ಬೀಳಗಿ: ತಾಲೂಕು ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟ ಸ್ಪರ್ಧೆಗಳು ತಾಲೂಕಿನ ಗರಡದಿನ್ನಿ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿತ್ತು.

ತಾಲೂಕಿನ ಮುಂಡಗನೂರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಥ್ರೋಬಾಲ್ ಸ್ಪರ್ಧೆಯಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆ ಆಗಿದ್ದಾರೆ. ವಿಜೇತ ವಿದ್ಯಾರ್ಥಿಗಳಿಗೆ ಶಿಕ್ಷಕರು , ಎಸ್ ಡಿ ಎಂ ಸಿ ಯವರು ಮತ್ತು ಗ್ರಾಮಸ್ಥರು ಅಭಿನಂದನೆ ತಿಳಿಸಿದ್ದಾರೆ ಎಂದು ಮುಖ್ಯೋಪಾಧ್ಯಾಯ ಬಿ ಎಸ್ ಪಾಟೀಲ ತಿಳಿಸಿದ್ದಾರೆ.

## ಡಿಸಿಎಂ ಡಾ. ಜಿ.ಪರಮೇಶ್ವರ ಜಿಲ್ಲಾ ಪ್ರವಾಸ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಅವರು ಅ.8 ಹಾಗೂ 9ರಂದು ವಿಜಯಪುರ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಅ.8ರಂದು ಸಂಜೆ 7 ಗಂಟೆಗೆ ರಾಯಚೂರಿನ ಹಟ್ಟಿಯಿಂದ ಹೊರಟು, ರಾತ್ರಿ 10ಗಂಟೆಗೆ ವಿಜಯಪುರಕ್ಕೆ ಆಗಮಿಸಿ ವಾಸ್ತವ್ಯ ಮಾಡಲಿದ್ದಾರೆ.

ಅ.9ರಂದು ಬೆಳಿಗ್ಗೆ 8 ಗಂಟೆಯಿಂದ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಲಿದ್ದಾರೆ. ಬಳಿಕ ಮಧ್ಯಾಹ್ನ 2 ಗಂಟೆಗೆ ವಿಜಯಪುರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬರ ಪರಿಸ್ಥಿತಿ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

ನಂತರ ಮಧ್ಯಾಹ್ನ 3.30ಕ್ಕೆ ವಿಜಯಪುರದಿಂದ ರಸ್ತೆ ಮಾರ್ಗವಾಗಿ ಹುಬ್ಬಳ್ಳಿಗೆ ತೆರಳಲಿರುವ ಅವರು, ರಾತ್ರಿ 8.25ರ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಅ.9ರಂದು ಮೀನುಮರಿ ಮಾರಾಟ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಭೂತನಾಳದ ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರದಲ್ಲಿ ಅ.9ರಂದು ಸಾಮಾನ್ಯ ಗೆಂಡೆ ಮೀನು ಮರಿಗಳನ್ನು ತಲಾ 1ರಂತೆ ಮಾರಾಟ ಮಾಡಲಾಗುತ್ತಿದೆ.

ರೈತರು ಇದರ ಸದುಪಯೋಗ ಪಡೆದು ಕೊಳ್ಳುವಂತೆಯೂ, ಮೀನುಮರಿ ಖರೀದಿಸು ವವರು ಕಡ್ಡಾಯವಾಗಿ ಆ ಧಾರ್ ಕಾರ್ಡ್ ತರಬೇಕು. ಹೆಚ್ಚಿನ ಮಾಹಿತಿ ಗೆ 9945959704, 99007 76205, 9480518679 ಸಂಪರ್ಕಿ ಸಬಹುದು ಎಂದು ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರದ ಸಹಾಯಕ ಪ್ರಾಧ್ಯಾಪಕರ ಪ್ರಕಟಣೆ ತಿಳಿಸಿದೆ.

## ತಾರಾನಗರ, ಮಹಾಲಕ್ಷ್ಮಿ ಬಡಾವಣೆಗಳಲ್ಲಿ ಕಳ್ಳರ ಉಪಟಳ: ಪೊಲೀಸ್ ಗಸ್ತು ಹೆಚ್ಚಿಸಲು ಮನವಿ

ಜೇವರ್ಗಿ:ಪಟ್ಟಣದ ತಾರಾನಗರ ಹಾಗೂ ಮಹಾಲಕ್ಷ್ಮಿ ಬಡಾವಣೆಗಳಲ್ಲಿ ಕಳೆದ ಎರಡು ತಿಂಗಳಿಂದ ಕಳ್ಳರ ಉಪಟಳ ಮಿತಿಮೀರಿದ್ದು, ಸಾರ್ವಜನಿಕರಲ್ಲಿ ತೀವ್ರ ಭಯ ಹಾಗೂ ಆತಂಕದ ವಾತಾವರಣ ನಿರ್ಮಾಣವಾಗಿದೆ.

ರಾತ್ರಿ ವೇಳೆಯಷ್ಟೇ ಅಲ್ಲದೆ, ಹಗಲು ಹೊತ್ತಿನಲ್ಲಿಯೇ ಸರಣಿ ಕಳ್ಳತನ ಹಾಗೂ ಕಳ್ಳತನದ ವಿಫಲ ಯತ್ನಗಳು ನಿರಂತರವಾಗಿ ಜರುಗುತ್ತಿವೆ. ಕಳೆದ ಎರಡು ತಿಂಗಳ ಅಲ್ಪಾವಧಿಯಲ್ಲೇ ಸುಮಾರು 10 ರಿಂದ 12 ಬಾರಿ ಕಳ್ಳರು ತಮ್ಮ ಕೈಚಳಕ ತೋರಿಸಿರುವುದು ಸ್ಥಳೀಯ ನಿವಾಸಿಗಳನ್ನು ಕಂಗಾಲುಗೊಳಿಸಿದೆ. ಕಳ್ಳರ ಹಾವಳಿಯಿಂದಾಗಿ ಬಡಾವಣೆಯ ಸಾರ್ವಜನಿಕರು, ವ್ಯಾಪಾರಿಗಳು, ಉದ್ಯೋಗಿಗಳು ಹಾಗೂ ಮಹಿಳೆಯರು ನೆಮ್ಮದಿಯಿಂದ ಜೀವನ ನಡೆಸದಂತಾಗಿದೆ. ಮನೆಗೆ ಬೀಗ ಹಾಕಿ ಹೊರಗಡೆ ಹೋಗಲು ಜನರು ತೀವ್ರವಾಗಿ ಹೆದರುವಂತಾಗಿದೆ.

ಈ ಸರಣಿ ಕಳ್ಳತನ ಹಾಗೂ ಅಪರಾಧ ಕೃತ್ಯಗಳಿಗೆ ಕೂಡಲೇ ಕಡಿವಾಣ ಹಾಕಬೇಕೆಂದು ಆಗ್ರಹಿಸಿ, ತಾರಾನಗರ ಮತ್ತು ಮಹಾಲಕ್ಷ್ಮಿ ಬಡಾವಣೆಯ ನಿವಾಸಿಗಳು ನಿಯೋಗದೊಂದಿಗೆ ಜೇವರ್ಗಿ ಪೊಲೀಸ್ ಠಾಣೆಗೆ ಭೇಟಿ ನೀಡಿ ಪೊಲೀಸ್ ಅಧಿಕಾರಿಗಳಿಗೆ ಜಂಟಿ ಮನವಿ ಪತ್ರವನ್ನು ಸಲ್ಲಿಸಿದರು. ಬಡಾವಣೆಗಳಲ್ಲಿ ಅಪರಾಧ ಪ್ರಕರಣಗಳನ್ನು ತಡೆಯಲು ಮತ್ತು ನಾಗರಿಕರ ಆಸ್ತಿ–ಪಾಸ್ತಿ ರಕ್ಷಿಸಲು ಪೊಲೀಸ್ ಇಲಾಖೆಯು ತಕ್ಷಣವೇ ಸೂಕ್ತ ಹಾಗೂ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿವಾಸಿಗಳು ಒತ್ತಾಯಿಸಿದರು.



ಬಡಾವಣೆಗಳ ಭದ್ರತೆಗಾಗಿ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ತಕ್ಷಣವೇ ‘ಡೈರಿ ಪಾಯಿಂಟ್’ (Diary Point) ಸ್ಥಾಪಿಸಬೇಕು, ರಾತ್ರಿ ವೇಳೆಯಲ್ಲಿ ಯಾವುದೇ ಲೋಪವಿಲ್ಲದೆ ನಿರಂತರವಾಗಿ ಪೊಲೀಸ್ ಗಸ್ತು ಪಡೆಯ (Night Patrolling) ಸಂಚಾರವನ್ನು ಹೆಚ್ಚಿಸಬೇಕು, ‘ಸಂಚಾರಿ ಬಿಟ್ ಪುಸ್ತಕ’ (Beat Book) ಇಟ್ಟು, ಮೇಲಧಿಕಾರಿಗಳು ಆಗಾಗ್ಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು, ಸರಣಿ ಕಳ್ಳತನದ ಹಿಂದೆ ಇರುವ ಅಪರಾಧಿಗಳನ್ನು ತಕ್ಷಣವೇ ಪತ್ತೆ ಹಚ್ಚಿ ಬಂಧಿಸಬೇಕು ಹಾಗೂ ಬಡಾವಣೆಗಳಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಬೇಕು, ಪೊಲೀಸ್ ಇಲಾಖೆಯು ಈ ಸಮಸ್ಯೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕೂಡಲೇ ಕಳ್ಳತನಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಸ್ಥಳೀಯ ನಾಗರಿಕರು ಆಗ್ರಹಿಸಿದರು.

ಮನವಿ ಸಲ್ಲಿಸುವ ಈ ಸಂದರ್ಭದಲ್ಲಿ ಪ್ರಮುಖ ವಕೀಲರಾದ ಮಲ್ಲಿಕಾರ್ಜುನ ಸೂಗೂರು, ಅಣವೀರ ಗದ್ದಗಿ, ಶಿಕ್ಷಕರಾದ ಶಿವಲಿಂಗಪ್ಪ, ಸಿದ್ದು ಪೂಜಾರಿ, ವೀರೇಶ ಹಳ್ಳಿ, ಅನಿಲ್ ಯಾಳವಾರ್, ಸಿದ್ದು ಯಾಳವಾರ್, ಈರಣ್ಣ ನರಬೋಳಿ, ಸಕ್ರಪ್ಪ ಪೂಜಾರಿ, ವೀರೇಶ ಹಿರೇಮಠ, ನಾಗರಾಜ ವಿ.ಟಿ, ರಾಜು ಮುದ್ದಡಗಿ ಸೇರಿದಂತೆ ಬಡಾವಣೆಯ ಹಲವಾರು ಪ್ರಮುಖ ನಾಗರಿಕರು ಉಪಸ್ಥಿತರಿದ್ದರು.

## ಸತ್ಯ, ಸರಳತೆ, ಅಹಿಂಸೆ ಗಾಂಧೀಜಿಯವರ ಜೀವನ ಮೌಲ್ಯಗಳು

ಕಲಬುರಗಿ : ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಸತ್ಯ ಮತ್ತು ಅಹಿಂಸೆಯ ಪ್ರತಿಪಾದಕ, ಸತ್ಯ, ಸರಳತೆ, ಶಿಸ್ತು ಮತ್ತು ಮಾನವೀಯ ಮೌಲ್ಯಗಳು ಅವರ ಜೀವನದ ಪ್ರಮುಖ ತತ್ವಗಳಾಗಿದ್ದವು ಎಂದು ಶರಣಬಸವ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಟಿ.ವ್ಹಿ. ಶಿವಾನಂದನ್ ಹೇಳಿದರು.

ನಗರದ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ರವಿವಾರ ಗಾಂಧಿ ಅಧ್ಯಯನ ಕೇಂದ್ರದ ವತಿಯಿಂದ ಹಮ್ಮಿಕೊಂಡ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಗಾಂಧೀಜಿಯವರು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಕನ್ನು ನೀಡಿದರು. ಸತ್ಯಾಗ್ರಹ ಮತ್ತು ಅಹಿಂಸೆ ಅವರ ಹೋರಾಟದ ಪ್ರಮುಖ ಅಸ್ತ್ರಗಳಾಗಿದ್ದವು. ಅಸಹಕಾರ ಚಳವಳಿ, ಉಪ್ಪಿನ ಸತ್ಯಾಗ್ರಹ ಮತ್ತು ಭಾರತ ಬಿಟ್ಟು ತೊಲಗಿ ಚಳವಳಿ ಮೂಲಕ ಬ್ರಿಟಿಷರ ಆಳ್ವಿಕೆಯ ವಿರುದ್ಧ ಜನರನ್ನು ಸಂಘಟಿಸಿದರು. ಸಮಾಜದಲ್ಲಿ ಸಮಾನತೆ, ಸ್ವಚ್ಛತೆ, ಸ್ವಾವಲಂಬನೆ, ಗ್ರಾಮೀಣ ಅಭಿವೃದ್ಧಿ, ಮಹಿಳಾ ಸಬಲೀಕರಣ ಮತ್ತು ಸಾಮಾಜಿಕ ನ್ಯಾಯ ನೆಲೆಗೊಳ್ಳಬೇಕು ಎಂಬುದು ಅವರ ಆಶಯವಾಗಿತ್ತು. ಅವರು ಸ್ವದೇಶಿ ಮತ್ತು ಖಾದಿಗೆ ವಿಶೇಷ ಮಹತ್ವ ನೀಡಿದರು. ಪ್ರತಿಯೊಬ್ಬರೂ ತಮ್ಮ ಕೈಗಳಿಂದ ದುಡಿದು ಸ್ವಾವಲಂಬಿಗಳಾಗಬೇಕು ಎಂದು ಕರೆ ನೀಡಿದರು. ಗಾಂಧೀಜಿಯವರ ಆದರ್ಶಗಳು, ಅವರ ತೋರಿದ ದಾರಿ ಪ್ರತಿಯೊಬ್ಬರಿಗೂ ಆದರ್ಶವಾಗಬೇಕೆಂದು ಹೇಳಿದರು.



ಅಧ್ಯಕ್ಷತೆವಹಿಸಿದ ಮಹಾವಿದ್ಯಾಲಯ ಪ್ರಾಚಾರ್ಯ ಡಾ.ಸುರೇಶಕುಮಾರ ನಂದಗಾಂವ ಮಾತಾನಾಡಿ, ಮಹಾತ್ಮ ಗಾಂಧೀಜಿಯವರು ಶರಣಬಸವೇಶ್ವರ ಸಂಸ್ಥಾನ ಭೇಟಿ ನೀಡಿ ಪೂಜ್ಯ ದೊಡ್ಡಪ್ಪ ಅಪ್ಪ ಅವರ ಭೇಟಿ ಮಾಡಿ ಆಶೀರ್ವಾದ ಪಡೆದರು. ಅವರ ಜೀವನವೇ ಒಂದು ದೊಡ್ಡ ಸಂದೇಶವಾಗಿದ್ದು, ಅವರ ತತ್ವಗಳು ಪಾಲಿಸುವುದು ಅವಶ್ಯಕವಾಗಿದೆ ಎಂದು ತಿಳಿಸಿದರು. ಹಿರಿಯ ಪ್ರಾಧ್ಯಾಪಕ ಡಾ.ಶಿವರಾಜ ಶಾಸ್ತ್ರೀ ಮಾತನಾಡಿದರು.

## ಅಂಗನವಾಡಿ-ಕಂ-ಕ್ರಷ್ ಕೇಂದ್ರಗಳ ನೇಮಕಾತಿಗೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಜಯಪುರ ಗ್ರಾಮೀಣ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ವ್ಯಾಪ್ತಿಯಲ್ಲಿ ಮಂಜೂರಾಗಿರುವ 10 ಅಂಗನವಾಡಿ-ಕಂ-ಕ್ರಷ್ ಕೇಂದ್ರಗಳಿಗೆ ಕ್ರಷ್ ಕಾರ್ಯಕರ್ತೆ ಹಾಗೂ ಕ್ರಷ್ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸರ್ಕಾರದ ಆದೇಶದನ್ವಯ ಆಯ್ಕೆಯಾಗುವ ಕ್ರಷ್ ಕಾರ್ಯಕರ್ತೆಗೆ ಮಾಸಿಕ ರೂ.5,500 ಹಾಗೂ ಕ್ರಷ್ ಸಹಾಯಕಿಯರಿಗೆ ಮಾಸಿಕ ರೂ.3,000 ಗೌರವಧನ ನೀಡಲಾಗುವುದು. ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ, ಅಗತ್ಯ ದಾಖಲೆಗಳನ್ನು ಲಗತ್ತಿಸಿ ಅ.23ರೊಳಗೆ ವಿಜಯಪುರ ಗ್ರಾಮೀಣಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಇರಿಸಲಾಗಿರುವ ಸೀಲ್ ಮಾಡಿದ ಪೆಟ್ಟಿಗೆಯಲ್ಲಿ ಖುದ್ದಾಗಿ ಸಲ್ಲಿಸಬೇಕು. ನಿಗದಿತ ಅವಧಿಯ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಅರ್ಜಿ ನಮೂನೆ ಹಾಗೂ ನೇಮಕಾತಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಬಾಲ ಭವನದ ಹತ್ತಿರ, ಜಿಲ್ಲಾ ಪಂಚಾಯತ್ ರಸ್ತೆ, ಮನುಗೂಳಿ ರಸ್ತೆಯಲ್ಲಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08352-276391 ಸಂಪರ್ಕಿಸಬಹುದಾಗಿದೆ ಎಂದು ವಿಜಯಪುರ ಗ್ರಾಮೀಣ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

## ಕ್ರೀಡಾಪಟುಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿಗೆ ಸ್ವಾಗತ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರಿ ನೇಮಕಾತಿಯಲ್ಲಿ ಶೇ. 2ರಷ್ಟು ಹಾಗೂ ಅರಣ್ಯ ಮತ್ತು ಪೊಲೀಸ್ ಇಲಾಖೆಗಳಲ್ಲಿ ಶೇ. 3ರಷ್ಟು ಮೀಸಲಾತಿ ಕಲ್ಪಿಸುವ ರಾಜ್ಯ ಸರ್ಕಾರದ ಅಧಿಸೂಚನೆಯನ್ನು ಸಿಂದಗಿ ವಿಧಾನಸಭಾ ಕ್ಷೇತ್ರ ಮಟ್ಟದ ಶಿಕ್ಷಣ ಸುಧಾರಣಾ ಸಮಿತಿಯ ನಾಮ ನಿರ್ದೇಶನ ಸದಸ್ಯ ಸಿದ್ಧಲಿಂಗ ಚೌಧರಿ ಸ್ವಾಗತಿಸಿದ್ದಾರೆ.

ಕ್ರೀಡೆಯಲ್ಲಿ ಸಾಧನೆಗೈದ ಪ್ರತಿಭೆಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ಈ ನಿರ್ಧಾರವು ಅವರ ಪರಿಶ್ರಮಕ್ಕೆ ನೀಡುವ ಗೌರವವಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶದ ಕ್ರೀಡಾಪಟುಗಳಿಗೆ ಭವಿಷ್ಯದ ಭರವಸೆ ನೀಡುವುದರ ಜೊತೆಗೆ, ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳಲು ಪ್ರೋತ್ಸಾಹ ನೀಡಲಿದೆ ಎಂದು ಅವರು ತಿಳಿಸಿದ್ದಾರೆ.

ಮೀಸಲಾತಿಯ ಪ್ರಯೋಜನ ಅರ್ಹ ಕ್ರೀಡಾಪಟುಗಳಿಗೆ ತಲುಪುವಂತೆ ಪಾರದರ್ಶಕವಾಗಿ ಅನುಷ್ಠಾನಗೊಳಿಸಬೇಕು. ಅರ್ಹತೆ, ಮಾನ್ಯ ಕ್ರೀಡಾ ಪ್ರಮಾಣಪತ್ರಗಳು ಹಾಗೂ ಅರ್ಜಿ ಪ್ರಕ್ರಿಯೆಯ ಕುರಿತು ಶಾಲಾ-ಕಾಲೇಜುಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕ ಮಾಹಿತಿ ನೀಡಬೇಕು ಎಂದು ಚೌಧರಿ ಒತ್ತಾಯಿಸಿದ್ದಾರೆ.

## ವಿವಿಧ ಮಾಧ್ಯಮ ಸಂಸ್ಥೆಗಳಲ್ಲಿ ಇಂಟರ್ನ್‌ಶಿಪ್ ಗಾಗಿ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ಬೆಂಗಳೂರು: ಕರ್ನಾಟಕ ಮಾಧ್ಯಮ ಅಕಾಡೆಮಿಯು ಮಹಿಳಾ ಆಯವ್ಯಯದಡಿ ಪತ್ರಿಕೋದ್ಯಮದಲ್ಲಿ ಆಸಕ್ತಿ ಇರುವ ಪತ್ರಿಕೋದ್ಯಮದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದ ಮಹಿಳಾ ಅಭ್ಯರ್ಥಿಗಳಿಗೆ ವಿವಿಧ ಮಾಧ್ಯಮ ಸಂಸ್ಥೆಗಳಲ್ಲಿ ಇಂಟರ್ನ್‌ಶಿಪ್ ಗಾಗಿ ಅವಕಾಶ ಕಲ್ಪಿಸಿದೆ ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷರಾದ ಅಯೇಶಾ ಖಾನಂ ತಿಳಿಸಿದ್ದಾರೆ.

ಬರವಣಿಗೆಯಲ್ಲಿ ಪರಿಣತಿ ಮತ್ತು ಪತ್ರಿಕೋದ್ಯಮದಲ್ಲಿ ಆಸಕ್ತಿ ಹೊಂದಿರುವ 2022-23, 2023-24, 2024-2025 ಹಾಗೂ 2025-2026ನೇ ಶೈಕ್ಷಣಿಕ ವರ್ಷದಲ್ಲಿ ಪಡೆದ ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಪತ್ರಿಕೋದ್ಯಮದಲ್ಲಿ ಪದವಿ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಒಟ್ಟು 20 ಅಭ್ಯರ್ಥಿಗಳಿಗೆ ಇಂಟರ್ನ್‌ಶಿಪ್ ಅವಕಾಶ ಒದಗಿಸಲಾಗುವುದು.

ಆಯ್ಕೆಯಾದ ಅಭ್ಯರ್ಥಿಗಳಿಗೆ ವಿವಿಧ ಮಾಧ್ಯಮ ಸಂಸ್ಥೆಗಳಲ್ಲಿ ಎರಡು ತಿಂಗಳ ಇಂಟರ್ನ್‌ಶಿಪ್‌ಗೆ ಅವಕಾಶ ಕಲ್ಪಿಸಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಅಕಾಡೆಮಿ ವತಿಯಿಂದ ಸ್ಟೈಪೆಂಡ್ ನೀಡಲಾಗುವುದು.

ಅಭ್ಯರ್ಥಿಗಳು ತಮ್ಮ ಸ್ವವಿವರ (Curriculum Vitae) ದೊಂದಿಗೆ ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ, ಪೂರಕ ದಾಖಲೆಗಳೊಂದಿಗೆ ಗೂಗಲ್ ಫಾರ್ಮ್ https://docs.google.com/forms/d/e/1FAIpQLSfYwla-tbEhb-vzUmRvWdsOCn44knMZ7orPgzEx-hxJsmUxIxlQ/viewform

ರಲ್ಲಿ ಅರ್ಜಿ ಸಲ್ಲಿಸುವುದು. ಅಭ್ಯರ್ಥಿಗಳ ಆಯ್ಕೆಯ ಅಂತಿಮ ತೀರ್ಮಾನ ಅಕಾಡೆಮಿಯ ಸಮಿತಿಯದ್ದೇ ಅಗಿರುತ್ತದೆ.

ಅರ್ಜಿ ಸಲ್ಲಿಸಲು 2026 ರ ಅಕ್ಟೋಬರ್ 23 ಕೊನೆಯ ದಿನವಾಗಿದೆ. ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಎಂದು ಅಯೇಶಾ ಖಾನಂ ಅವರು ಅಕಾಡೆಮಿಯ ಪ್ರತಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅ.23ಕ್ಕೆ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ ಹಿನ್ನೆಲೆ:ಮತ ಚಲಾಯಿಸಲು ನೊಂದಾಯಿತ ಮತದಾರರಿಗೆ ರಜೆ ಘೋಷಣೆ



ಕಲಬುರಗಿ: ಕರ್ನಾಟಕ ವಿಧಾನ ಪರಿಷತ್ತಿಗೆ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಮತದಾನ ಅಕ್ಟೋಬರ್ 23 ರಂದು ಬೆಳಿಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆ ವರೆಗೆ ಕ್ಷೇತ್ರದಾದ್ಯಂತ ನಡೆಯಲಿದ್ದು, ಮತ ಚಲಾಯಿಸಲು ಅನುಕೂಲವಾಗುವಂತೆ ಕ್ಷೇತ್ರದ ನೊಂದಾಯಿತ ಮತದಾರರಿಗೆ ಕ್ಷೇತ್ರದ ಚುನಾವಣಾಧಿಕಾರಿಯಾಗಿರುವ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್ ಅವರು ರಜೆ ಘೋಷಿಸಿದ್ದಾರೆ.

ಇನ್ನು ಮತ ಎಣಿಕೆ ಕಾರ್ಯವು ಅಕ್ಟೋಬರ್ 27 ರಂದು ಬೆಳಿಗ್ಗೆ 8 ಗಂಟೆಯಿಂದ ಕಲಬುರಗಿಯ ಗುಲಬರ್ಗಾ ವಿಶ್ವವಿದ್ಯಾಲಯದ ಗಣಿತ ವಿಭಾಗದ ಭಾಸ್ಕರ ಸಭಾಂಗಣದಲ್ಲಿ ನಡೆಯಲಿದ್ದು, ಅಂದು ಗಣಿತ ವಿಭಾಗದ ಕಟ್ಟಡ ಮತ್ತು ಭದ್ರತಾ ಕೊಠಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೂ ಸಹ ರಜೆ ಘೋಷಿಸಲಾಗಿದೆ.

## 26 ನೇ ವರ್ಷದ 'ಅಮ್ಮ ಪ್ರಶಸ್ತಿ'ಗೆ ಕೃತಿಗಳ ಆಹ್ವಾನ



ಕಲಬುರಗಿ: ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಮ್ಮ ಪ್ರಶಸ್ತಿ' ಪ್ರಖ್ಯಾತಿಯನ್ನು ಪಡೆದಿದ್ದು, ಇದೀಗ 26 ನೇ ವರ್ಷದ ಸಂಭ್ರಮದಲ್ಲಿದೆ. ಪತ್ರಕರ್ತ ಹಾಗೂ ಸಾಹಿತಿ ಮಹಿಪಾಲರೆಡ್ಡಿ ಮುನ್ನೂರ್ ಅವರು ತಮ್ಮ ತಾಯಿಯ ಸ್ಮರಣಾರ್ಥವಾಗಿ ಜಿಲ್ಲೆಯ ಸೇಡಂನ ಮಾತೋಶ್ರೀ ಮಹಾದೇವಮ್ಮ ನಾಗಪ್ಪ ಮುನ್ನೂರ್ ಪ್ರತಿಷ್ಠಾನದ ವತಿಯಿಂದ ಕೊಡಮಾಡುವ 26 ನೇ ವರ್ಷದ ಅಮ್ಮ ಪ್ರಶಸ್ತಿ'ಗಾಗಿ 2025 ಮತ್ತು 2026 ನೇ ಸಾಲಿನಲ್ಲಿ ಪ್ರಕಟವಾದ ಕೃತಿಗಳನ್ನು ಆಹ್ವಾನಿಸಲಾಗಿದೆ.

ಕಳೆದ 25 ವರ್ಷಗಳಿಂದ ನಿರಂತರ ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನೀಡಲಾಗುತ್ತಿರುವ ಈಗ ಅಮ್ಮ ಪ್ರಶಸ್ತಿಗೆ 26 ರ ಸಂಭ್ರಮ. ಈ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದ ಪ್ರತಿಷ್ಠಿತ 'ಅಮ್ಮ ಪ್ರಶಸ್ತಿ'ಗಾಗಿ ಸಾಹಿತ್ಯದ ಕಾವ್ಯ, ಕಥೆ, ನಾಟಕ, ಕಾದಂಬರಿ ಹಾಗೂ ಲೇಖನಗಳ ಸಂಕಲನ ಪ್ರಕಾರದ ಕೃತಿಗಳ ಎರಡು ಪ್ರತಿಗಳನ್ನು ಕಳುಹಿಸಬಹುದು. ಆಯ್ಕೆಯಾದ 5 ಕೃತಿಗಳಿಗೆ ತಲಾ 5 ಸಾವಿರ ನಗದು ಪುರಸ್ಕಾರ, ಗೌರವದ ಕಾಣಿಕೆ ಹಾಗೂ ತೊಗರಿ ಧಾನ್ಯದೊಂದಿಗೆ ಸತ್ಕರಿಸಲಾಗುವುದು. ಕೃತಿಗಳನ್ನು ಸ್ವೀಕರಿಸಲು ಅಕ್ಟೋಬರ್ 30 ಕೊನೆಯ ದಿನಾಂಕವಾಗಿರುತ್ತದೆ ಎಂದು ಪ್ರತಿಷ್ಠಾನದ ಸಂಚಾಲಕಿ ರತ್ನಕಲಾ ಮಹಿಪಾಲರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃತಿಗಳನ್ನು ಕಳುಹಿಸಬೇಕಾದ ವಿಳಾಸ : ಶ್ರೀಮತಿ ರತ್ನಕಲಾ ಮಹಿಪಾಲರೆಡ್ಡಿ ಮುನ್ನೂರ್, ಸಂಚಾಲಕಿ, ಮಾತೋಶ್ರೀ ಮಹಾದೇವಮ್ಮ ನಾಗಪ್ಪ ಮುನ್ನೂರ್ ಪ್ರತಿಷ್ಠಾನ "ಅಮ್ಮ ನಿಲಯ", ರಾಮಚಂದ್ರ ಲೇಔಟ್, ಪಿಡಬ್ಲ್ಯೂಡಿ ಕಚೇರಿ ಹತ್ತಿರ, ಸೇಡಂ-585 222. ಕಲಬುರಗಿ ಜಿಲ್ಲೆ. ಹೆಚ್ಚಿನ

## ಉನ್ನತ ಶಿಕ್ಷಣ ಪಡೆದು ಉತ್ತಮ ಪ್ರಜೆಗಳಾಗಿ :ಆದಿತ್ಯಗೌಡ

■ ಉದಯರಶ್ಮಿ ದಿನಪತ್ರಿಕೆ



ಕೆಂಭಾವಿ: ವಿದ್ಯಾರ್ಥಿ ಜೀವನ ಅಮೂಲ್ಯವಾದದ್ದು ಜ್ಞಾನಾರ್ಜನೆಯ ಜೊತೆಗೆ ಮಾನವೀಯ ಮೌಲ್ಯಗಳಿಗೆ ಮೊದಲ ಆದ್ಯತೆ ನೀಡುವ ಮಾದರಿ ವ್ಯಕ್ತಿತ್ವ ತಮ್ಮದಾಗಬೇಕು ಎಂದು ಯುವ ಮುಖಂಡ ಆದಿತ್ಯಗೌಡ ಎಸ್ ಪೊಲೀಸ್ ಪಾಟೀಲ್ ಹೇಳಿದರು.

ಪಟ್ಟಣದ ಶ್ರೀಮತಿ ಗಂಗೂಬಾಯಿ ಶಾಂತಗೌಡ ಪೊಲೀಸ್ ಪಾಟೀಲ್ ಮೆಮೋರಿಯಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಬಿಎ, ಬಿಕಾಂ, ಬಿಎಸ್ಸಿ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಹಾಗೂ ವಿವಿಧ ಘಟಕಗಳ ಉದ್ಘಾಟನೆ ಮತ್ತು ವಿಶೇಷ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮೂರು ವರ್ಷದ ಪದವಿ ಶಿಕ್ಷಣ ನೂರು ವರ್ಷಗಳ ಜೀವನಕ್ಕೆ ಭದ್ರ ಅಡಿಪಾಯ ವಿದ್ಯಾರ್ಥಿಗಳು ತಮ್ಮ ಉಜ್ವಲ ಭವಿಷ್ಯಕ್ಕಾಗಿ ಭವ್ಯ ಭಾರತದ ನಿರ್ಮಾಣಕ್ಕಾಗಿ ಕಂಕಣ ಬದ್ಧರಾಗಿ, ಜೀವನ ರೂಪಿಸಿಕೊಳ್ಳಲು ಮಾರ್ಕ್ಸ್ ಕಾರ್ಡ್ ಮುಖ್ಯವಲ್ಲ ಸಂಸ್ಕಾರ ಮುಖ್ಯ, ಪರಿಶ್ರಮವಿದ್ದರೆ ಪ್ರತಿಫಲ ಖಂಡಿತ ಎಂದು ಹೇಳಿದರು.

ಪುರಸಭೆ ಮುಖ್ಯಾಧಿಕಾರಿ ಪ್ರಕಾಶ ಬಗಲಿ, ಸಿಡಿಸಿ ಸದಸ್ಯ ಸಾಹೇಬ್ ಲಾಲ್ ಆಂದೇಲಿ, ಹ ವಿ ಸಂಘದ ಅಧ್ಯಕ್ಷ ವೀರೇಶ ಎಸ್, ಉಪಾಧ್ಯಕ್ಷ ಹರ್ಷದ್, ಮಾತನಾಡಿದರು. ಪ್ರಾಂಶುಪಾಲ ಡಾ ನಾಗಪ್ಪ ಚಾವಲ್ಕರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಾಂಸ್ಕೃತಿಕ ಘಟಕದ ಸಂಚಾಲಕರು, ಸಹ ಪ್ರಾಧ್ಯಾಪಕಿ ನಸ್ರೀನ್ ತಾಜ್ ಪ್ರಾಸ್ತಾವಿಕ ಮಾತನಾಡಿದರು.

ಇದೇ ವೇಳೆ ಕಾಲೇಜಿನಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ವಯೋ ನಿವೃತ್ತಿ ಹೊಂದಿದ ಸಂಗಮೇಶ ಪಟ್ಟಣಕರ್ ಹಾಗೂ ವರ್ಗಾವಣೆಗೊಂಡ ವಾಣಿಜ್ಯ ವಿಭಾಗದ ಮುಖ್ಯಸ್ಥ ಡಾ ಸಿದ್ದಲಿಂಗ ರಾಠೋಡ್ ಇವರಿಗೆ ವಿಶೇಷವಾಗಿ ಸನ್ಮಾನಿಸಿ ಗೌರವಿಸಲಾಯಿತು. ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಗುಲಾಬಿ ಹೂ, ಪೇನ್ ವಿತರಿಸಿ ಸ್ವಾಗತಿಸಲಾಯಿತು. ಪ್ರಮುಖರಾದ ಶರಣಬಸವ ವಿ ಡಿಗ್ಗಾವಿ, ರಮೇಶ ಕೊಡಗಾನೂರು, ಶಿವಪ್ಪ ಜಿ ಕಂಬಾರ, ಶರಣಪ್ಪ ಯಾಳಗಿ, ಡಾ ಪೂಜಾ ಹೊನ್ನುಟಗಿ, ಸುಮಾ ಎಚ್, ಹಾಗೂ

ಹ ವಿ ಸಂಘದ ಕಾರ್ಯದರ್ಶಿ ರೇವಣಸಿದ್ದಯ್ಯ ಮಠ ಸೇರಿದಂತೆ ಹಲವರಿದ್ದರು. ವಿದ್ಯಾರ್ಥಿನಿ ಸುಷ್ಮಾ ಇವರಿಂದ ಮೂಡಿ ಬಂದ ಭರತ ನಾಟ್ಯ ಮನಸೂರೆಗೊಂಡಿತು. ಉಪನ್ಯಾಸಕ ಮಲ್ಲಿಕಾರ್ಜುನ ಮರಡ್ಡಿ ಸ್ವಾಗತಿಸಿದರು, ಡಾ ಯಂಕನಗೌಡ ಪಾಟೀಲ್ ನಿರೂಪಿಸಿದರು, ಮಲ್ಲಣ್ಣ ಬಿಳೆಬಾವಿ ವಂದಿಸಿದರು.

### 13 ಖರೀದಿ ಕೇಂದ್ರಗಳಲ್ಲಿ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆ ಆರಂಭಿಸಲು ಜಿಲ್ಲಾಧಿಕಾರಿ ಡಾ. ಆನಂದ ಕೆ. ಸೂಚನೆ

## ಪ್ರತಿ ಕ್ವಿಂಟಾಲ್‌ಗೆ ರೂ. 8,343 ಬೆಂಬಲ ಬೆಲೆಗೆ ಸೂರ್ಯಕಾಂತಿ ಖರೀದಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2026ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಎಫ್‌ಎಕ್ಯೂ ಗುಣಮಟ್ಟದ ಸೂರ್ಯಕಾಂತಿಯನ್ನು ಪ್ರತಿ ಕ್ವಿಂಟಾಲ್‌ಗೆ ರೂ. 8,343 ಬೆಂಬಲ ಬೆಲೆಯಲ್ಲಿ ಖರೀದಿಸಲು ರೈತರ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆಯನ್ನು ಆರಂಭಿಸುವಂತೆ ಜಿಲ್ಲಾಧಿಕಾರಿ ಡಾ. ಆನಂದ ಕೆ. ಸೂಚಿಸಿದ್ದಾರೆ.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಕನಿಷ್ಠ ಬೆಂಬಲ ಬೆಲೆ ಕಾರ್ಯಪಡೆ ಸಮಿತಿ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಗಿದ್ದು, ರೈತರ ನೋಂದಣಿಗೆ 80 ದಿನಗಳು ಹಾಗೂ ಖರೀದಿ ಪ್ರಕ್ರಿಯೆಗೆ 90 ದಿನಗಳ ಅವಧಿ ನಿಗದಿಪಡಿಸಲಾಗಿದೆ.

ಜಿಲ್ಲೆಯಲ್ಲಿ ಬೆಂಬಲ ಬೆಲೆಯಡಿ ಸೂರ್ಯಕಾಂತಿ ಖರೀದಿಗಾಗಿ ಬಬಲೇಶ್ವರ, ಸವನಹಳ್ಳಿ, ಬೆಳ್ಳುಬ್ಬಿ, ತಾಜಪುರ, ವಿಜಯಪುರ, ಮುದ್ದೇಬಿಹಾಳ, ತಾಳಿಕೋಟಿ, ತಂಗಡಗಿ, ಇಂಡಿ, ಚಡಚಣ, ಹಲಸಂಗಿ, ಸಿಂದಗಿ ಹಾಗೂ ಬಸವನಬಾಗೇವಾಡಿ ಸೇರಿದಂತೆ ಒಟ್ಟು 13 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ಕೇಂದ್ರ ಸರ್ಕಾರದ ಖರೀದಿ ಏಜೆನ್ಸಿಗಳಾಗಿ ನಾಫೆಡ್ ಹಾಗೂ ಎನ್‌ಸಿಸಿಎಫ್ ಸಂಸ್ಥೆಗಳನ್ನು ಮತ್ತು ರಾಜ್ಯ ಮಟ್ಟದ ಖರೀದಿ ಏಜೆನ್ಸಿಯಾಗಿ ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ನಿಯಮಿತ ಸಂಸ್ಥೆಯನ್ನು ನೇಮಿಸಲಾಗಿದೆ. ಖರೀದಿ ಪ್ರಕ್ರಿಯೆಯನ್ನು ತಕ್ಷಣ ಆರಂಭಿಸುವಂತೆ ಸಂಬಂಧಿಸಿದ ಜಿಲ್ಲಾ ವ್ಯವಸ್ಥಾಪಕರಿಗೆ ಸೂಚಿಸಲಾಗಿದೆ.

ಪ್ರತಿ ರೈತರಿಂದ ಪ್ರತಿ ಎಕರೆಗೆ ಗರಿಷ್ಠ 4 ಕ್ವಿಂಟಾಲ್ ಹಾಗೂ ಒಬ್ಬ ರೈತನಿಂದ ಗರಿಷ್ಠ 20 ಕ್ವಿಂಟಾಲ್ ಎಫ್‌ಎಕ್ಯೂ ಗುಣಮಟ್ಟದ ಸೂರ್ಯಕಂತಿಯನ್ನು ಖರೀದಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು. ಬೆಂಬಲ ಬೆಲೆ ಯೋಜನೆಯ ಮಾರ್ಗಸೂಚಿಯನ್ವಯ ಖರೀದಿಸಿದ ಉತ್ಪನ್ನದ ಮೌಲ್ಯವನ್ನು ಮೂರು ದಿನಗಳೊಳಗಾಗಿ ರೈತರ ಆಧಾರ್ ಸಂಖ್ಯೆ ಜೋಡಣೆಯಾದ ಬ್ಯಾಂಕ್ ಖಾತೆಗೆ ನೇರ ಲಾಭ ವರ್ಗಾವಣೆ (ಡಿಬಿಟಿ) ಮೂಲಕ ಜಮೆ ಮಾಡುವಂತೆ ನಿರ್ದೇಶನ ನೀಡಲಾಯಿತು. ಆವರ್ತನಿಧಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆಯೂ ಸೂಚಿಸಲಾಯಿತು.

ಜಿಲ್ಲೆಯಲ್ಲಿ ಪ್ರಸಕ್ತ 6,641 ಹೆಕ್ಟೇರ್ ಪ್ರದೇಶದಲ್ಲಿ ಸೂರ್ಯಕಾಂತಿ ಬಿತ್ತನೆಯಾಗಿದ್ದು, ಅಂದಾಜು 79,692 ಕ್ವಿಂಟಾಲ್ ಇಳುವರಿ ನಿರೀಕ್ಷಿಸಲಾಗಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಸೂರ್ಯಕಾಂತಿ ಪ್ರತಿ ಕ್ವಿಂಟಾಲ್‌ಗೆ ರೂ. 7,000ರಿಂದ ರೂ. 7,300ರ ವರೆಗೆ ಮಾರಾಟವಾಗುತ್ತಿರುವುದಾಗಿ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಹೀಗಾಗಿ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಾಲ್‌ಗೆ ರೂ. 8,343 ದೊರೆಯಲಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಲಾಗಿದೆ.

ಸಭೆಯಲ್ಲಿ ಸಹಕಾರ ಸಂಘಗಳ ಉಪನಿಬಂಧಕರು, ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ (ಕೆಒಎಫ್) ಜಿಲ್ಲಾ ವ್ಯವಸ್ಥಾಪಕರು, ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕರು ಸೇರಿದಂತೆ ಸಂಬಂಧಿಸಿದ ಮೂರು ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು. ಈ ಕುರಿತು ಕನಿಷ್ಠ ಬೆಂಬಲ ಬೆಲೆ ಕಾರ್ಯಪಡೆ ಸಮಿತಿ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ರೈತರ ನೋಂದಣಿಗೆ ೮೦ ದಿನ; ಖರೀದಿಗೆ ೯೦ ದಿನಗಳ ಕಾಲಾವಕಾಶ

## ರೂ.8,780 ಬೆಂಬಲ ಬೆಲೆಗೆ ಹೆಸರುಕಾಳು ಖರೀದಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2026ನೇ ಸಾಲಿನ ಮುಂಗಾರು ಹಂಗಾಮಿನ ಎಫ್‌ಎಕ್ಯೂ ಗುಣಮಟ್ಟದ ಹೆಸರುಕಾಳನ್ನು ಕೇಂದ್ರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಾಲ್‌ಗೆ ರೂ. 8,780ರ ಬೆಂಬಲ ಬೆಲೆಯಲ್ಲಿ ಖರೀದಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 5ರಂದು ನಡೆದ ಕನಿಷ್ಠ ಬೆಂಬಲ ಬೆಲೆ ಜಿಲ್ಲಾ ಕಾರ್ಯಪಡೆ ಸಮಿತಿ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಗಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಹೆಸರುಕಾಳು ಪ್ರತಿ ಕ್ವಿಂಟಾಲ್‌ಗೆ ರೂ. 7,500ರಿಂದ ರೂ. 8,000ರ ವರೆಗೆ ಮಾರಾಟವಾಗುತ್ತಿದ್ದು, ರೈತರು ಬೆಂಬಲ ಬೆಲೆ ಯೋಜನೆಯ ಸೌಲಭ್ಯ ಪಡೆದುಕೊಳ್ಳುವಂತೆ ಜಿಲ್ಲಾಡಳಿತ ತಿಳಿಸಿದೆ.

ಯೋಜನೆಯಡಿ ಪ್ರತಿ ರೈತರಿಂದ ಪ್ರತಿ ಎಕರೆಗೆ ಗರಿಷ್ಠ 4 ಕ್ವಿಂಟಾಲ್ ಹಾಗೂ ಒಬ್ಬ ರೈತನಿಂದ ಗರಿಷ್ಠ 20 ಕ್ವಿಂಟಾಲ್ ಹೆಸರುಕಾಳನ್ನು ಖರೀದಿಸಲಾಗುವುದು. ರೈತರ ಅನುಕೂಲಕ್ಕಾಗಿ ವಿಜಯಪುರ, ಬಸವನಬಾಗೇವಾಡಿ, ಮುದ್ದೇಬಿಹಾಳ, ಸಿಂದಗಿ, ಇಂಡಿ, ಚಡಚಣ ಹಾಗೂ ಬಬಲೇಶ್ವರ ತಾಲೂಕುಗಳಲ್ಲಿನ ಟಿಎಪಿಸಿಎಂಎಸ್ ಸಂಸ್ಥೆಗಳು ಮತ್ತು ಬಬಲೇಶ್ವರ ತಾಲೂಕಿನ ಪಿಕೆಪಿಎಸ್‌ನಲ್ಲಿ ಖರೀದಿ ಕೇಂದ್ರಗಳನ್ನು ಗುರುತಿಸಲಾಗಿದೆ.

ರೈತರ ನೋಂದಣಿ ಪ್ರಕ್ರಿಯೆಗೆ 80 ದಿನಗಳು ಹಾಗೂ ಹೆಸರುಕಾಳು ಖರೀದಿ ಪ್ರಕ್ರಿಯೆಗೆ 90 ದಿನಗಳ ಕಾಲಾವಕಾಶ ನಿಗದಿಪಡಿಸಲಾಗಿದೆ. ಖರೀದಿಸಿದ ಹೆಸರುಕಾಳಿನ ಮೊತ್ತವನ್ನು ರೈತರ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಮೂರು ದಿನಗಳೊಳಗಾಗಿ ನೇರವಾಗಿ ಜಮೆ ಮಾಡಲಾಗುವುದು. ಖರೀದಿ ಪ್ರಕ್ರಿಯೆಯ ಮೇಲ್ವಿಚಾರಣೆಗಾಗಿ ಆಯಾ ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಕಾರ್ಯದರ್ಶಿಗಳನ್ನು ತಾಲೂಕು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಹೆಸರುಕಾಳು ಖರೀದಿ ಹಾಗೂ ನೋಂದಣಿ ಕುರಿತು ಹೆಚ್ಚಿನ ಮಾಹಿತಿಗಾಗಿ ಕೆಎಸ್‌ಸಿಎಂಎಫ್ ಶಾಖಾ ವ್ಯವಸ್ಥಾಪಕರ ಮೊಬೈಲ್ ಸಂಖ್ಯೆ 8722687143 ಅನ್ನು ಸಂಪರ್ಕಿಸಬಹುದು ಎಂದು ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತಳವಾರ ಸಮಾಜದ ಜಾಗೃತಿ ಸಭೆ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ತಾಲ್ಲೂಕಿನ ಹಿರೇಬೇನೂರ ಗ್ರಾಮದಲ್ಲಿ ತಳವಾರ ಸಮಾಜದ ಗುರುಹಿರಿಯರು ಹಾಗೂ ಯುವಕರ ಸಮ್ಮುಖದಲ್ಲಿ ಸಮಾಜದ ಜಾಗೃತಿ ಸಭೆ ನಡೆಯಿತು.

ಸಭೆಯಲ್ಲಿ ಮಕ್ಕಳ ಶೈಕ್ಷಣಿಕ ಅಭಿವೃದ್ಧಿ, ರೈತರಿಗೆ ಎಸ್‌ಟಿ ಅನುದಾನದಡಿ ದೊರೆಯುವ ಸೌಲಭ್ಯಗಳು ಹಾಗೂ ಸಮಾಜದ ಹಕ್ಕುಗಳ ಕುರಿತು ಜಾಗೃತಿ ಮೂಡಿಸಲಾಯಿತು. ವಿಜಯಪುರ ಜಿಲ್ಲೆಯಲ್ಲಿ ಕೇಂದ್ರೀಯ ಏಕಲವ್ಯ ಮಾದರಿ ವಸತಿ ಶಾಲೆ ಮಂಜೂರು ಮಾಡುವ ಕುರಿತು ಚರ್ಚೆ ನಡೆಸಿ, ಈ ಸಂಬಂಧ ಮೇಲಾಧಿಕಾರಿಗಳಿಗೆ ಮನವಿ ಸಲ್ಲಿಸುವ ಬಗ್ಗೆ ನಿರ್ಧರಿಸಲಾಯಿತು.

ಇದೇ ವೇಳೆ ತಳವಾರ ಸಮಾಜಕ್ಕೆ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂಬ ಆಗ್ರಹ ಸಭೆಯಲ್ಲಿ ಕೇಳಿಬಂತು. ಇಂಡಿ ತಾಲ್ಲೂಕಿನಲ್ಲಿ ತಳವಾರ ಸಮಾಜದ ಜನಸಂಖ್ಯೆ ಸುಮಾರು 26 ಸಾವಿರ ಇದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಸಮುದಾಯಕ್ಕೆ ಮುಂಬರುವ ತಾಲ್ಲೂಕು ಪಂಚಾಯತ ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಸೂಕ್ತ ಅವಕಾಶ ಕಲ್ಪಿಸಬೇಕು ಎಂದು ಸಮಾಜದ ಮುಖಂಡರು ಒತ್ತಾಯಿಸಿದರು. ಅವಕಾಶದಿಂದ ವಂಚಿತರಾದರೆ ರಾಜಕೀಯ ಪಕ್ಷಗಳ ವಿರುದ್ಧ ಪ್ರಜಾಸತ್ತಾತ್ಮಕ ರೀತಿಯಲ್ಲಿ ತಮ್ಮ ಅಸಮಾಧಾನ ವ್ಯಕ್ತಪಡಿಸುವ ಕುರಿತು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು ಎಂದು ಮುಖಂಡರು ತಿಳಿಸಿದರು. ಸಭೆಯಲ್ಲಿ ವಿಜಯಪುರ ಟಿಎಸ್ ಅಧ್ಯಕ್ಷ ಸೋಮು ಜಮಾದಾರ, ಯುವ ಮುಖಂಡ ಪರಶು ನಾಟಿಕಾರ್,ಶಿವಶರಣ ನಾಟಿಕರ್ ,ಮಂಜುನಾಥ ವಿಠ್ಠಲ ಜಮಾದಾರ , ಸಂಗಮೇಶ ವಿ ಡಪಲಾಪುರ,ಈರಪ್ಪ ಮಲ್ಲಪ್ಪ ನಾಟಿಕಾರ, ಕಾಶಿನಾಥ್ ಸಿದ್ದಪ್ಪ ನಾಯಿಕೋಡಿ, ಶಾಂತು ವಾಲೀಕಾರ ಸೇರಿದಂತೆ ಹಲವರಿದ್ದರು.

## ಶತಮಾನ ಕಂಡ ಅಪರೂಪದ ಸಾಹಿತಿ ಕುವೆಂಪು :ಡಾ.ಕಟ್ಟಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಇಂದಿನ ಯುವಜನಾಂಗ ಕುವೆಂಪು ಅವರ ವಿಚಾರ ಧಾರೆಗಳನ್ನು ಕರಗತ ಮಾಡಿಕೊಳ್ಳಬೇಕಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬೆಂಗಳೂರು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧಕ್ಷ ಡಾ.ಚನ್ನಪ್ಪ ಕಟ್ಟಿ ಹೇಳಿದರು.

ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಬೆಂಗಳೂರು, ಐಕ್ಯೂಎಸಿ, ಕನ್ನಡ ವಿಭಾಗ ಭಾಷಾ ವಿಜ್ಞಾನ ವೇದಿಕೆ ಸಹಯೋಗದಲ್ಲಿ ಅ.06 ರಂದು ಆಯೋಜಿಸಲಾಗಿದ್ದ 'ಕುವೆಂಪು ಓದು:ಕಮ್ಮಟ' ಎಂಬ ಎರಡು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಹೊಸ ರೀತಿಯ ಆಲೋಚನೆಗೆ ಮುಂದಾಗಬೇಕು. ಈ ನಿಟ್ಟಿನಲ್ಲಿ ಕುವೆಂಪು ಓದು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಕುವೆಂಪು ಅವರ ಸಾಹಿತ್ಯವು ಸಾಮಾನ್ಯ ಜನರ ಕೇಂದ್ರೀಕೃತವಾಗಿದೆ , ಮಹಿಳೆಯರ, ನೇಗಿಲಯೋಗಿ ರೈತರನ್ನು ಇವರ ಮೇಲೆ ಇವರ ಸಾಹಿತ್ಯ ರಚನೆಯಾಗಿದೆ ಏಕೆಂದರೆ ನಿಜವಾದ ಅನ್ನವನು ಉತ್ಪಾದಿಸುವವರು ರೈತರು. ಕುವೆಂಪು ಅವರು ತಮ್ಮ ಸಾಹಿತ್ಯದ ಮೂಲಕ ಗೌರವಿಸುವ ಕಾರ್ಯ ಮಾಡಿದ್ದಾರೆ. ನಮ್ಮ ನಾಡಿನಲ್ಲಿ ಶತಮಾನ ಕಂಡ ಅಪರೂಪದ ವ್ಯಕ್ತಿತ್ವ. ಅವರ ವಿಚಾರಧಾರೆಳನ್ನು ಇಂತಹ ಕುವೆಂಪು ಒದು ಕಮ್ಮಟ ಕಾರ್ಯಾಗಾರದ ಮೂಲಕ ಇಂದಿನ ಯುವಕರಿಗೆ ಅವರ ಸಂದೇಶ ತಲಪಿಸುವ ಕಾರ್ಯ ನಡೆಯುತ್ತಿದೆ ಎಂದು ಹೇಳಿದರು.

ಈ ವೇಳೆಯಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸದಸ್ಯ ಸಂಚಾಲಕ ಎಸ್. ಗಂಗಾಧರಯ್ಯ, ಆಡಳಿತಾಧಿಕಾರಿ ಪ್ರೊ.ವಿ.ಎಸ್.ಬಗಲಿ ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ಡಾ. ಶ್ರೀನಿವಾಸ ಎ.ಟಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಕಮ್ಮಟದ ನಿರ್ದೇಶಕ ಡಾ.ವೈ.ಎಂ.ಯಾಕೊಳ್ಳಿ, ರಿಜಿಸ್ಟ್ರಾರ್ ದತ್ತಪ್ಪ ಸಾಗನೂರ ಐಕ್ಯೂಎಸಿ ಸಂಯೋಜಕ ಡಾ. ಪಿ.ಎಸ್. ಪಾಟೀಲ್, ಭಾಷಾ ವಿಜ್ಞಾನ ವೇದಿಕೆ ಸಂಯೋಜಕ ಡಾ.ಧರ್ಮಗುರು ಪ್ರಸಾದ ಎಂ.ಪಿ, ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ಉಷಾದೇವಿ ಹಿರೇಮಠ ಉಪಸ್ಥಿತರಿದ್ದರು.

ಡಾ.ಉಷಾದೇವಿ ಹಿರೇಮಠ ಪರಿಚಯಿಸಿ ಸ್ವಾಗತಿಸಿದರು. ಡಾ.ಸವಿತಾ ಲಮಾಣಿ ನಿರ್ವಹಿಸಿದರು .ಡಾ ಧರ್ಮಗುರು ಪ್ರಸಾದ ಎಂ.ಪಿ ವಂದಿಸಿದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR